# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ



ರಾಜಸ್ಥಾನ: ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ. ಮೋಹನ್ ಭಾಗವತ್ ಅವರು ಕೊಟ್‌ಪುತಲಿ–ಬೆಹ್ರೋರ್ ಜಿಲ್ಲೆಯ ಪಾವಟಾದ ಬಳಿಯ ಬಾವಡಿಯಲ್ಲಿರುವ ಬಾಲನಾಥ ಆಶ್ರಮದಲ್ಲಿ ನಡೆದ ಮಹಾಮೃತ್ಯುಂಜಯ ಯಜ್ಞದಲ್ಲಿ ಭಾಗವಹಿಸಿ, ಅಲ್ಲಿನ ಸಾಧು ಸಂತರನ್ನು ಭೇಟಿ ಮಾಡಿದರು.

ಸಂಪುಟ : 46 | ಸಂಚಿಕೆ : 11 | ಭಾದ್ರಪದ–ಆಶ್ವಯುಜ | ಕಲಿಯುಗಾಬ್ದ 5126 | 01–10–2024 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


## ವಕ್ಫ್ ಕಾಯಿದೆ ತಿದ್ದುಪಡಿ – ಏನು? ಯಾಕೆ?

■ ಕ್ಷಮಾ ನರಗುಂದ

ಯಾವುದೇ ಸ್ಥಿರ ಅಥವಾ ಚರ ಆಸ್ತಿಯನ್ನು ಒಬ್ಬ ಮುಸಲ್ಮಾನ ಧಾರ್ಮಿಕ ಶೈಕ್ಷಣಿಕ ದತ್ತಿಯಾಗಿ ನೀಡಿದರೆ ಅದನ್ನು ವಕ್ಫ್ ಎಂದು ಪರಿಗಣಿಸುತ್ತಾರೆ. ವಕ್ಫ್ ಆಸ್ತಿಯಲ್ಲಿ ಮಶ್ರುತ್–ಉಲ್ ಖಿದ್ಮತ್ ಒಳಗೊಂಡು ಎಲ್ಲ ರೀತಿಯ ಅನುದಾನಗಳು ಕೂಡ ಸೇರಿವೆ. ಮಶ್ರುತ್–ಉಲ್ ಖಿದ್ಮತ್ ಎಂದರೆ ಮುಸಲ್ಮಾನ ಸಮುದಾಯಕ್ಕೆ ಉಪಯೋಗಿಸಲು ನೀಡಿದ ದಾನ. ಅಲ್ಲದೆ ವಕ್ಫ್–ಅಲಾಲ್–ಔಲಾದ್ ಕೂಡ ವಕ್ಫ್ ಆಸ್ತಿ ಎಂದು ಪರಿಗಣಿಸಲಾಗುತ್ತದೆ. ವಕ್ಫ್–ಅಲಾಲ್–ಔಲಾದ್ ಎಂದರೆ ಒಂದು ಪ್ರೈವೇಟ್ ಟ್ರಸ್ಟ್ ಎಂದು ಅರ್ಥ ಮಾಡಿಕೊಳ್ಳಬಹುದು.

1947ರ ನಂತರ ಎಲ್ಲ ವಕ್ಫ್ ಆಸ್ತಿಗಳನ್ನು ನೋಡಿಕೊಳ್ಳಲು ಮುಸಲ್ಮಾನ ವಕ್ಫ್ ಕಾನೂನು, 1923 ಅನ್ವಯವಾಗುತ್ತಿತ್ತು. 1954ರಲ್ಲಿ ಅಂದಿನ ಕಾಂಗ್ರೆಸ್ ಸರ್ಕಾರ, ವಕ್ಫ್ ಆಸ್ತಿ ಆಡಳಿತದ ಕೇಂದ್ರೀಕರಣಕ್ಕಾಗಿ ಒಂದು ಹೊಸ ಕಾನೂನನ್ನು ಜಾರಿಗೊಳಿಸಿತು ಇದರಡಿಯಲ್ಲಿ ಅನೇಕ ವಕ್ಫ್ ಬೋರ್ಡ್‌ಗಳನ್ನೂ ಸ್ಥಾಪಿಸಲಾಯಿತು. 1954ರಲ್ಲಿ ವಕ್ಫ್ ಕಾನೂನಿನಡಿಯಲ್ಲಿ ಕುಟುಂಬದ ನಿರ್ವಹಣೆಗೆಂದು ಸ್ಥಾಪಿಸಿದ ದತ್ತಿಯನ್ನು ಸಹ ಬೋರ್ಡಿನ ಅಧಿಕಾರವ್ಯಾಪ್ತಿಗೆ ತರಲಾಯಿತು. ನಂತರ 2013ರಲ್ಲಿ ಮುಸಲ್ಮಾನರಲ್ಲದೆ ಇತರರು ಸಹ ವಕ್ಫ್‌ಗೆ ದತ್ತಿಯನ್ನು ಮಾಡಬಹುದು ಎಂದು ತಿದ್ದುಪಡಿಮಾಡಲಾಯಿತು. 1954ರಲ್ಲಿ ವಕ್ಫ್ ಟ್ರಿಬ್ಯೂನಲ್‌ಗಳನ್ನು ಸ್ಥಾಪಿಸಿ ವಕ್ಫ್ ಆಸ್ತಿಗೆ ಸಂಬಂಧಪಟ್ಟ ಎಲ್ಲ ವಿವಾದಗಳನ್ನು ಸಿವಿಲ್ ಕೋರ್ಟ್‌ನ್ನು ಹೊರತುಪಡಿಸಿ ಟ್ರಿಬ್ಯೂನಲ್ ವ್ಯಾಪ್ತಿಗೆ ತರಲಾಯಿತು. 2013ರಲ್ಲಿ ವಕ್ಫ್ ಆಸ್ತಿಯಲ್ಲಿ ಯಾರಾದರೂ ಬಾಡಿಗೆದಾರರಿದ್ದರೆ, ಅಂತಹ eviction ದಾವೆಗಳನ್ನು ಕೂಡ ಟ್ರಿಬ್ಯೂನಲ್ ನಿರ್ಧರಿಸಬಹುದೆಂದು ಅದರ ಅಧಿಕಾರವ್ಯಾಪ್ತಿಯನ್ನು ಹೆಚ್ಚಿಸಲಾಯಿತು. 1954ರವರೆಗೆ ಯಾವುದೇ ಆಸ್ತಿ ವಕ್ಫ್ ಅಡಿಯಲ್ಲಿ ಬರುತ್ತದೆಯೋ ಅದರ ಸರ್ವೇ ಖರ್ಚನ್ನು ವಕ್ಫ್ ಬೋರ್ಡ್ ನೋಡಿಕೊಳ್ಳುತ್ತಿತ್ತು. 2013ರಲ್ಲಿ ಅದನ್ನು ಸರ್ಕಾರ ನೋಡಿಕೊಳ್ಳಬೇಕೆಂದು ತಿದ್ದುಪಡಿ ಮಾಡಲಾಯಿತು. 2013ರ ತಿದ್ದುಪಡಿಯ ನಂತರ ವಕ್ಫ್ ಬೋರ್ಡಿನ ಸದಸ್ಯರು ಮುಸಲ್ಮಾನರೇ ಆಗಿರಬೇಕೆಂದು ಬದಲಾಯಿಸಲಾಯಿತು.

2013ರವರೆಗೂ ವಕ್ಫ್ ಎಂದು ಪರಿಗಣಿಸಲ್ಪಟ್ಟ ಯಾವುದೇ ಆಸ್ತಿಯನ್ನು ಮಾರಾಟಮಾಡಬೇಕಾದ ಪ್ರಸಂಗದಲ್ಲಿ ಬೋರ್ಡಿನ ಅನುಮತಿಯನ್ನು ಪಡದು ಮಾರಬಹುದಾಗಿತ್ತು. ಆದರೆ 2013ರ ತಿದ್ದುಪಡಿಯ ನಂತರ ಅಂತಹ ಯಾವುದೇ ಆಸ್ತಿ ವಹಿವಾಟಿಗೆ ಅವಕಾಶವೇ ಇರಲಿಲ್ಲ. ಅಲ್ಲದೆ ಯಾವುದೇ ವಕ್ಫ್ ಎಂದು ಪರಿಗಣಿಸಲ್ಪಟ್ಟ ಆಸ್ತಿಯನ್ನು ಯಾರಾದರೂ ಒತ್ತುವರಿ ಮಾಡಿಕೊಂಡಿದ್ದಾರೆಂದು ವಕ್ಫ್ ಬೋರ್ಡಿಗೆ ಅನಿಸಿದರೂ




ಸಹ, ಬೋರ್ಡಿಗೆ ಅದನ್ನು ತೆರವುಗೊಳಿಸುವ ಅಧಿಕಾರವನ್ನು ನೀಡಲಾಯಿತು. ಇತರ ಕಾನೂನುಗಳು ಮತ್ತು ವಕ್ಫ್ ಕಾನೂನಿನಲ್ಲಿ ಯಾವುದೇ ದ್ವಂದ್ವ ಉಂಟಾದಲ್ಲಿ ವಕ್ಫ್ ಕಾನೂನು ಮೇಲುಗೈ ಸಾಧಿಸುತ್ತದೆ ಎಂದು ಸೇರಿಸಲಾಯಿತು.

2024ರಲ್ಲಿ ಜಾರಿಗೊಳಿಸಬಹುದಾದ ವಕ್ಫ್ ತಿದ್ದುಪಡಿ ಕಾನೂನು ಈ ರೀತಿಯ ಅಧಿಕಾರವನ್ನು ಹಿಡಿತದಲ್ಲಿ ತೆಗೆದುಕೊಳ್ಳುವ ಪ್ರಯತ್ನ. ಈ ಕಾನೂನಿನ ತಿದ್ದುಪಡಿ ಮುಸಲ್ಮಾನರ ಅಧಿಕಾರವನ್ನಾಗಲಿ, ಆಚರಣೆಯನ್ನಾಗಲಿ ಅಥವಾ ಜೀವನಪದ್ಧತಿಯನ್ನಾಗಲಿ ಬದಲಾಯಿಸುವುದಿಲ್ಲ. ಯಾವ ವಕ್ಫ್ ಬೋರ್ಡಿಗೆ ಅಧಿಕಾರದ ಲಗಾಮು ಇರಲಿಲ್ಲವೋ ಅದನ್ನು ಸರಿಪಡಿಸಲು ಮುಂದಾಗಿದೆ. ಈ ರೀತಿಯ ಲಗಾಮು ವಿಶ್ವದ ಅನೇಕ ಮುಸಲ್ಮಾನ ರಾಷ್ಟ್ರಗಳಲ್ಲಿಯೂ ವಕ್ಫ್ ಬೋರ್ಡಿಗೆ ಹಾಕಲಾಗಿದೆ. ಟರ್ಕಿ, ಸಿಂಗಾಪುರ್, ಇಂಡೋನೇಷ್ಯಾ, ಇರಾಕ್, ಯು.ಎ.ಈ. ಇತರ ರಾಷ್ಟ್ರಗಳಲ್ಲಿಯೂ ವಕ್ಫ್ ನಿರ್ವಹಣೆ ಕೇಂದ್ರೀಕೃತವಾಗಿದ್ದು ರಾಷ್ಟ್ರದ ಅಭಿವೃದ್ಧಿಯನ್ನು ಸಾಧಿಸಲು ಸಾಧನವಾಗಿದೆ. ಭಾರತದ ವಕ್ಫ್ ಬೋರ್ಡಿನ ಇಂದಿನ ಕಥೆ ಬೇರೆಯದ್ದೇ ಇದೆ. "ನೇಶನ್ ಫರ್ಸ್ಟ್" ಅನ್ನುವ ಅಂತರ್ವಾಹಿನಿ ವಕ್ಫ್‌ನಲ್ಲೂ ಹರಿಯಬೇಕಾಗಿದೆ, 2024ರಲ್ಲಿ ಪ್ರಸ್ತಾಪಿಸಿರುವ ಎಲ್ಲ ತಿದ್ದುಪಡಿಗಳು ಅಗತ್ಯವಾಗಿವೆ.

ಮುಸಲ್ಮಾನರಲ್ಲದವರನ್ನು ವಕ್ಫ್‌ನಿಂದ ದೂರ ಉಳಿಸಬೇಕು. ಅವರ ಆಸ್ತಿ ವಕ್ಫ್‌ಗೆ ಸೇರಲು ಸಾಧ್ಯವಿಲ್ಲ. ಈಗಾಗಲೇ ತಿಳಿಸಿದ ಹಾಗೆ ಮುಸಲ್ಮಾನರು ಮಾತ್ರ 'ವಕ್ಫ್' ಮಾಡಬಹುದು. 2013ನಲ್ಲಿ ಆದ ಅನ್ಯಾಯವನ್ನು 2024 ತಿದ್ದುಪಡಿ ಸರಿಪಡಿಸಲು ಪ್ರಯತ್ನಿಸುತ್ತದೆ. ವಕ್ಫ್–ಅಲಾಲ್–ಔಲಾದ್ ಅಡಿಯಲ್ಲಿ ಆ ಕುಟುಂಬಕ್ಕೆ ಸೇರಿದ ಉತ್ತರಾಧಿಕಾರಿಗಳಿಗೆ, ಆ ಕುಟುಂಬದ ಮಹಿಳೆಯರಿಗೆ ಹಕ್ಕು ಕುಂಠಿತಗೊಂಡಿತ್ತು. ಅವರ ಅಧಿಕಾರವನ್ನು ಮತ್ತೆ ಅವರಿಗೆ ನೀಡಬೇಕಾಗಿರುವುದು ಸಮಾಜದ ಮತ್ತು ಸರ್ಕಾರದ ಕರ್ತವ್ಯವಾಗಿರುತ್ತದೆ.

ವಕ್ಫ್ ಬೋರ್ಡಿಗೆ ನೀಡಿರುವ ಅಧಿಕಾರದಲ್ಲಿ ಕೆಲವು ಅಂಶಗಳನ್ನು 'ಕಲೆಕ್ಟರ್'ಗೆ ವರ್ಗಾಯಿಸಲಾಗಿದೆ. ಇದು ಧರ್ಮನಿರಪೇಕ್ಷ ತೀರ್ಪು ಮಂಡನೆಗೆ ಸಹಾಯಕಾರಿ. ಇಲ್ಲವಾದಲ್ಲಿ ಇತ್ತೀಚಿನ ದಿನಗಳಲ್ಲಿ ನಾವು ವಕ್ಫ್ ಬೋರ್ಡ್ ತಾನು ಅನೇಕ ಸರ್ಕಾರಿ ಜಮೀನನ್ನು ಸಹ ವಕ್ಫ್‌ಗೆ ಸೇರಿದ್ದು ಎಂದು ತೀರ್ಪು ನೀಡುತಿತ್ತು.

ಅನುಚ್ಛೇದ 40ರಲ್ಲಿ ವಕ್ಫ್ ಬೋರ್ಡ್ ತನಗೆ ಯಾವುದೇ ಅಸ್ತಿ ವಕ್ಫ್‌ಗೆ ಸೇರಿರಬಹುದು ಎಂದು ಭಾವಿಸಿದರೂ ಸಹ ಅದರ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಪಡೆಯುವ ಅಧಿಕ್ಕಾರ ಹೊಂದಿತ್ತು. ಈ ತಿದ್ದುಪಡಿಯಿಂದ ಅದನ್ನು ತಡೆಯಬಹುದು. ಸರ್ಕಾರಿ ಜಮೀನಿದ್ದರೆ ಅನೇಕ ಬಾರಿ ವಕ್ಫ್ ಅದನ್ನು ದುರ್ಬಳಿಕೆ ಮಾಡಿದೆ. ಅಂತಹ ಅನೇಕ ದಾವೆಗಳು ನ್ಯಾಯಾಲಯದ ಸಮ್ಮುಖದಲ್ಲಿವೆ. ಈ ತಿದ್ದುಪಡಿಯಿಂದ ಯಾವುದೇ ಸರ್ಕಾರಿ ಜಮೀನನ್ನು ವಕ್ಫ್ ಎಂದು ಗುರುತಿಸಲ್ಪಟ್ಟರೂ ಅಥವಾ ಘೋಷಿಸಲ್ಪಟ್ಟರೂ ಸಹ ಅದನ್ನು ವಕ್ಫ್ ಎಂದು ತನಿಖೆ ಇಲ್ಲದೇ ಪರಿಗಣಿಸಲು ತಿದ್ದುಪಡಿ ಜಾರಿಗೆ ಬಂದ ನಂತರ ಸಾಧ್ಯವಿಲ್ಲ. ಕಲೆಕ್ಟರ್ ಆ ಜಮೀನಿನ ಎಲ್ಲ ದಾಖಲೆಗಳನ್ನು ನೋಡಿ, ಯಾವುದೇ ಸಮಯದಲ್ಲಿ ಆ ಜಮೀನನ್ನು ನ್ಯಾಯಸಮ್ಮತವಾಗಿ ವಕ್ಫ್ ಮಾಡಲಾಗಿತ್ತೇ ಎಂದು ಪರಿಶೀಲಿಸಿ ನಂತರ ತನಿಖಾ ವರದಿಯನ್ನು ನೀಡಬೇಕು ಎಂದು ತಿದ್ದುಪಡಿ ಪ್ರಸ್ತಾಪಿಸುತ್ತದೆ. ಇದು ಸಾಂವಿಧಾನಿಕವಾಗಿಯೂ ಸಿಂಧುವೇ ಆಗಿರುತ್ತದೆ.

ASI ಎಂದರೆ ಆರ್ಖಿಯೋಲಾಜಿಕಲ್ ಸೊಸೈಟಿ ಆಫ್ ಇಂಡಿಯಾ ಸಹ ಈ ತಿದ್ದುಪಡಿಗೆ ತಮ್ಮ ಬೆಂಬಲ ನೀಡಿದ್ದಾರೆ. ಅವರೇ ತಿಳಿಸಿದಂತೆ ಸುಮಾರು 120 ಐತಿಹಾಸಿಕ ಕಟ್ಟಡಗಳನ್ನು ವಕ್ಫ್ ಬೋರ್ಡ್ ತನ್ನದೆಂದು ಹೇಳಿಕೊಳ್ಳುತ್ತಿದ್ದು, ASI ಜೊತೆ ವಕ್ಫ್ ವಿವಾದ ನಡೆಯುತ್ತಲೇ ಇದೆ. ಅನೇಕ ಹಿಂದೂ ಮಂದಿರಗಳನ್ನು ಕೆಡವಿ ಮುಸಲ್ಮಾನರು ತಮ್ಮ ಶ್ರೇಷ್ಠತೆಯನ್ನು ಸಾಬೀತು ಪಡಿಸಲು ಮಾಡಿರುವ ಪ್ರಯತ್ನ ಎಲ್ಲರಿಗೂ ತಿಳಿದದ್ದೇ ಆಗಿದೆ. ಅದನ್ನು ಇಷ್ಟು ದಿವಸಗಳ ಕಾಲ ನಾವು ಉಪಯೋಗಿಸಿರುವ ಕಾರಣ ಅದು 'ವಕ್ಫ್'ಗೆ ಸೇರಿದೆ ಎಂಬ ವಿತಂಡವಾದವನ್ನು ಬೋರ್ಡ್ ಮಾಡಿರುವುದನ್ನು ಕೇಳಿದ್ದೇವೆ, ಓದಿದ್ದೇವೆ. ಈ ಎಲ್ಲ ಎಗ್ಗು–ಸಿಗ್ಗಿಲ್ಲದ ವಾದಗಳಿಗೆ ಈ ತಿದ್ದುಪಡಿ ಮಂಗಳ ಹಾಡಲು ಹೊರಟಿದೆ.

ವಕ್ಫ್ ಬೋರ್ಡಿನಲ್ಲಿ ಇಲ್ಲಿಯವರೆಗೂ ಹೆಣ್ಣುಮಕ್ಕಳನ್ನೂ ಸದಸ್ಯರನ್ನಾಗಿ ಮಾಡಿಕೊಳ್ಳುತ್ತಿರಲಿಲ್ಲ. ನಮ್ಮ ದೇಶದ ಸಂಸ್ಕೃತಿ ಮಾತೃ ಪ್ರಧಾನವಾಗಿದ್ದರೂ ಸಹ, ಬೋರ್ಡಿನಲ್ಲಿಯೂ ಸಹ ನಮ್ಮ ಮುಸಲ್ಮಾನ ಭಗಿನಿಯರಿಗೆ ಅವಕಾಶವಿರಲಿಲ್ಲ. 2024ರ ತಿದ್ದುಪಡಿಯ ಪ್ರಕಾರ ಇಬ್ಬರು ಹೆಣ್ಣುಮಕ್ಕಳನ್ನು ಕಡ್ಡಾಯವಾಗಿ ಸದಸ್ಯರನ್ನಾಗಿಸಬೇಕಾಗುತ್ತದೆ. ಅದರಿಂದ ಇಲ್ಲಿಯವರೆಗೂ ಮುಸಲ್ಮಾನ ಹೆಣ್ಣು ಮಕ್ಕಳಿಗೆ ಆಸ್ತಿ ಹಂಚಿಕೆಯಲ್ಲಿ ಆದ ಅನ್ಯಾಯ ಸರಿಯಾಗಬಹುದು.

ಅಷ್ಟೇ ಅಲ್ಲದೆ ಮುಸಲ್ಮಾನರಲ್ಲಿ ಇರುವಂತಹ, (ಭಾರತದಲ್ಲಿ ಕಡಿಮೆ ಸಂಖ್ಯೆಯಲ್ಲಿ) ಅನೇಕ ಪಂಗಡಗಳು, ಅಂದರೆ ಬೊಹರಾ, ಆಘಾಖಾನಿ, ಶಿಯಾ, ಇಂತಹ ಪಂಗಡಗಳನ್ನು ಸರಿಯಾಗಿ ಪ್ರತಿನಿಧಿಸಲು ಮತ್ತು ಅವರ 'ವಕ್ಫ್' ನಿರ್ವಹಣೆಯನ್ನು ಮಾಡಲು ಪ್ರತ್ಯೇಕ ಬೋರ್ಡ್‌ಗಳ ರಚನೆಗೆ ಕೇಂದ್ರ ಮುಂದಾಗಿದೆ. ಇದರಿಂದ ಕಡಿಮೆ ಸಂಖ್ಯೆಯಲ್ಲಿ ಇರುವ ಮುಸಲ್ಮಾನರ ಬಗ್ಗೆಯೂ ಈ ತಿದ್ದುಪಡಿ ಕಾಳಜಿ ತೋರಿದೆ. ಈ ರೀತಿ ಭಾರತದ ಎಲ್ಲ ಮುಸಲ್ಮಾನರನ್ನು ಈ ತಿದ್ದುಪಡಿ ಕಾಯಿದೆ ಒಂದುಗೂಡಿಸುವ ಪ್ರಯತ್ನ ಮಾಡಿದೆ. ಒಟ್ಟಾಗಿ ಹೇಳಬೇಕೆಂದರೆ ಈ ಕಾಯಿದೆ ಈ ಕಾಲಘಟ್ಟದಲ್ಲಿ ಭಾರತ ಅಭಿವೃದ್ಧಿಗೆ ಅವಶ್ಯಕ ಮತ್ತು ಅನಿವಾರ್ಯ. ■

### ವಕ್ಫ್‌ಗೆ ಸೇರಿದ ಒಟ್ಟು ಆಸ್ತಿ ಎಷ್ಟು?

ಸಂವಿಧಾನದ ಸರ್ವಧರ್ಮಸಮನ್ವಯದ ನೀತಿಗೆ ಕುಠಾರಪ್ರಾಯವಾಗಿರುವ ಈ ನೀತಿಯು ವಕ್ಫ್ ಬೋರ್ಡ್ ಅನ್ನು ದೇಶದಲ್ಲೇ ಮೂರನೆಯ ಅತ್ಯಂತ ಹೆಚ್ಚು ಆಸ್ತಿ ಹೊಂದಿರುವ ಸಂಸ್ಥೆಯನ್ನಾಗಿ ಮಾಡಿದೆ. ಭಾರತ ಸರ್ಕಾರದ ರೈಲ್ವೆ ಇಲಾಖೆ ಮತ್ತು ರಕ್ಷಣಾ ಇಲಾಖೆಗಳನ್ನು ಬಿಟ್ಟರೆ ವಕ್ಫ್ ಬೋರ್ಡ್ ಮೂರನೇ ಸ್ಥಾನ ಪಡೆಯುತ್ತದೆ. ಆನ್‌ಲೈನ್‌ನಲ್ಲಿ ಸಿಗುವ ವಕ್ಫ್ ಮ್ಯಾನೇಜ್ಮೆಂಟ್ ಸಿಸ್ಟಮ್ ಆಫ್ ಇಂಡಿಯಾ (WAMSI) ಪ್ರಕಾರ ಇಡೀ ದೇಶದಲ್ಲಿ 8,72,292 ವಕ್ಫ್ ಸ್ಥಿರ ಆಸ್ತಿಗಳು (3,29,995 ಎಸ್ಟೇಟ್‌ಗಳು), 16,713 ಚರಾಸ್ತಿಗಳು ಇವೆ. ಅವುಗಳಲ್ಲಿ ಸ್ಥಿರಾಸ್ತಿಗಳ ವಿಸ್ತೀರ್ಣವು ಸುಮಾರು 9.4 ಲಕ್ಷ ಎಕರೆಗಳಷ್ಟು ಇದೆ. ಇವುಗಳ ಮೌಲ್ಯ 1.2 ಲಕ್ಷ ಕೋಟಿ ರೂ. ಎಂದು ಅಂದಾಜು. ಸುಮಾರು 3,29,995 ಆಸ್ತಿಗಳನ್ನು ಡಿಜಿಟೈಸ್ ಮಾಡಲಾಗಿದೆ. ಇವೆಲ್ಲಾ ಆಸ್ತಿಗಳು ಒಟ್ಟಿಗೆ ವಾರ್ಷಿಕವಾಗಿ ಸುಮಾರು 200 ಕೋಟಿ ರೂ.ಗಳ ಆದಾಯ ತರುತ್ತಿವೆ.

### ನ್ಯಾಯಾಲಯಗಳಲ್ಲಿ ವಕ್ಫ್ ವಿವಾದಗಳು

ಆಗಸ್ಟ್ 2023ರವರೆಗೆ ವಕ್ಫ್ ವಿವಾದದ 58,000ಕ್ಕೂ ಹೆಚ್ಚಿನ ದೂರುಗಳು 18,426 ಪ್ರಕರಣಗಳ ಅಡಿಯಲ್ಲಿ ದಾಖಲಾಗಿವೆ. ಇವುಗಳಲ್ಲಿ 165 ವಿವಾದ ಪ್ರಕರಣಗಳು ಸರ್ವೋಚ್ಚ ನ್ಯಾಯಾಲಯ ಮತ್ತು ವಿವಿಧ ಉಚ್ಚ ನ್ಯಾಯಾಲಯಗಳಲ್ಲಿ ಇವೆ. ನ್ಯಾಯಮಂಡಳಿಗಳಲ್ಲಿ (Tribunals) ಸುಮಾರು 40,900ರಷ್ಟು ಪ್ರಕರಣಗಳಿವೆ. ಇದರಲ್ಲಿ ಕೆಲವು ಪ್ರಕರಣಗಳಲ್ಲಿ ನ್ಯಾಯಾಲಯದ ತೀರ್ಪು ಬಂದಿವೆ. ಇನ್ನು ಕೆಲವಲ್ಲಿ ನ್ಯಾಯಾಲಯದ ತಡೆಯಾಜ್ಞೆ ಬಂದಿದೆ. ಮತ್ತೆ ಕೆಲವು ಹಾಗೇ ಉಳಿದಿವೆ. ಬೆಂಗಳೂರಿನಲ್ಲಿ 'ಈದ್ಗಾ ಮೈದಾನ' ಎಂದು ಕರೆಯಲ್ಪಡುವ ಮೈದಾನ, ಉತ್ತರ ಪ್ರದೇಶದಲ್ಲಿರುವ ಕಾಶಿಯ ವಿಶ್ವನಾಥ ಮಂದಿರ, ಕೃಷ್ಣಜನ್ಮಭೂಮಿ, ತಾಜಮಹಲ್, ತಮಿಳುನಾಡಿನ 1,500 ವರ್ಷ ಪುರಾತನ ಚೋಳರ ಸುಂದರೇಶ್ವರ ದೇವಾಲಯ ಸೇರಿದಂತೆ ಹರ್ಯಾಣ, ಪಶ್ಚಿಮ ಬಂಗಾಳ, ಗುಜರಾತ್, ತೆಲಂಗಾಣ, ಮಹಾರಾಷ್ಟ್ರ ರಾಜ್ಯಗಳ ಹಲವು ಸ್ಥಳಗಳು ವಿವಾದದ ಕಾರಣ ನಾಯಾಲಯದ ಮೆಟ್ಟಿಲಲ್ಲಿದೆ.

# ಸಂಸ್ಮರಣೆ

## ರಾಣಿ ದುರ್ಗಾವತಿ (5 ಅಕ್ಟೋಬರ್ 1524 – 24 ಜೂನ್ 1564)

ಭಾರತ ಧೀಮಂತ ಮಹಾನ್ ಪುರುಷರನ್ನು ಕಂಡಂತಹ ರಾಷ್ಟ್ರ. ಇಂತಹ ರಾಷ್ಟ್ರದಲ್ಲಿ ಜಗತ್ತು ನಿಬ್ಬೆರಗಾಗುವಂತೆ ಆಡಳಿತ ನಡೆಸಿದ ಅದೆಷ್ಟೋ ವೀರವನಿತೆಯರು ಆಗಿ ಹೋಗಿದ್ದಾರೆ. ಅಂತಹವರಲ್ಲಿ ರಾಣಿ ದುರ್ಗಾವತಿ ದೇವಿಯೂ ಒಬ್ಬರು. ಅವರ ಸಾಹಸದ ಜೀವನ ಇಂದಿಗೂ ಮಾರ್ಗದರ್ಶಕವಾಗಿದೆ.

ದುರ್ಗಾವತಿ ದೇವಿಯು ಮಹೋಬ ಸಾಮ್ರಾಜ್ಯವನ್ನು ಆಳುತ್ತಿದ್ದ ಚಂದೇಲ ರಜಪೂತ ರಾಜ ಶಾಲ್ಬಹಮ್ನ ಮಗಳಾಗಿ 1524ರ ಅಕ್ಟೋಬರ್ 5 ರಂದು ಜನಿಸಿದರು. 1542ರಲ್ಲಿ, ಅವರು ಗರ್ಹಾ ಸಾಮ್ರಾಜ್ಯದ ರಾಜ ಸಂಗ್ರಾಮ್ ಷಾ ಅವರ ಹಿರಿಯ ಮಗ ದಲ್ಪತ್ ಷಾ ಅವರನ್ನು ವಿವಾಹವಾದರು. ದುರಾದೃಷ್ಟವಶಾತ್ ರಾಜ ದಲ್ಪತ್ ಷಾ 1550ರಲ್ಲಿ ನಿಧನರಾದರು. ಅವರ ಉತ್ತರಾಧಿಕಾರಿ ವೀರ ನಾರಾಯಣ ಅವರು ಕೇವಲ 5 ವರ್ಷ ವಯಸ್ಸಿನವರಾಗಿದ್ದರು. ಹಾಗಾಗಿ ಪತ್ನಿ, ರಾಣಿ ದುರ್ಗಾವತಿ ರಾಜಪ್ರತಿನಿಧಿಯಾಗಿ ಗೊಂಡ್ವಾನಾ ಸಾಮ್ರಾಜ್ಯದ ಆಡಳಿತದ ಪೀಠಕ್ಕೇರಿದರು. ದಿವಾನ್ ಅಧರ್ ಕಾಯಸ್ಥ ಮತ್ತು ಮಂತ್ರಿ ಮಾನ್ ಠಾಕೂರ್ ಆಡಳಿತವನ್ನು ಯಶಸ್ವಿಯಾಗಿ ಮತ್ತು ಪರಿಣಾಮಕಾರಿಯಾಗಿ ನೋಡಿಕೊಳ್ಳುವಲ್ಲಿ ರಾಣಿಗೆ ಸಹಾಯ ಮಾಡಿದರು. ರಾಣಿ ದುರ್ಗಾವತಿ ತನ್ನ ಸಾಮ್ರಾಜ್ಯದಾದ್ಯಂತ ಶಾಂತಿ, ಒಗ್ಗಟ್ಟನ್ನು ಕಾಪಾಡಿದರು. ಮಾತ್ರವಲ್ಲದೆ ವ್ಯಾಪಾರವನ್ನು ಉತ್ತೇಜಿಸಿದರು. ರಾಣಿ ದುರ್ಗಾವತಿ ತನ್ನ ರಾಜಧಾನಿಯನ್ನು ಸಿಂಗೋರ್‌ಗಢ ಕೋಟೆಯಿಂದ ಚೌರಗಢ ಕೋಟೆಗೆ ಸ್ಥಳಾಂತರಿಸಿದಳು. ಹೀಗೆ ರಾಜಕೀಯ ಬದಲಾವಣೆಗಳನ್ನೂ ತಂದರು.

1562ರಲ್ಲಿ, ಅಕ್ಬರನು ಮಾಲ್ವಾ ದೊರೆ ಬಾಜ್ ಬಹದ್ದೂರ್ ಅನ್ನು ಸೋಲಿಸಿದನು ಮತ್ತು ಮಾಲ್ವಾವನ್ನು ವಶಪಡಿಸಿಕೊಂಡನು. ಅದನ್ನು ಮೊಘಲ್ ಪ್ರಭುತ್ವವನ್ನಾಗಿ ಮಾಡಿದನು. ಪರಿಣಾಮವಾಗಿ, ರಾಣಿಯ ರಾಜ್ಯದ ಗಡಿಯು ಮೊಘಲ್ ಸಾಮ್ರಾಜ್ಯವನ್ನು ಮುಟ್ಟಿತು. ಮೊಘಲರು ರಾಣಿ ದುರ್ಗಾವತಿ ಮತ್ತು ಗೊಂಡ್ವಾನ ಸಂಪತ್ತನ್ನು ಬಯಸಿದರು.



ಮೊಘಲ್ ಚಕ್ರವರ್ತಿ ಅಕ್ಬರನಿಂದ ಅನುಮತಿಯನ್ನು ಪಡೆದ ನಂತರ ಅವರು ರಾಣಿಯ ಸಾಮ್ರಾಜ್ಯದ ಮೇಲೆ ಮೊಘಲ್ ಆಕ್ರಮಣವನ್ನು ಮುನ್ನಡೆಸಿದರು.

ಆಕ್ರಮಣಕಾರಿ ಮೊಘಲ್ ಸೇನೆಯಲ್ಲಿ ಬಹುಸಂಖ್ಯೆಯಲ್ಲಿ ತರಬೇತಿ ಪಡೆದ ಸೈನಿಕರು ಆಧುನಿಕ ಆಯುಧಗಳೊಂದಿಗಿದ್ದರೆ, ರಾಣಿ ದುರ್ಗಾವತಿಯ ಬದಿಯಲ್ಲಿ ಪಾರಂಪರಿಕ ಆಯುಧಗಳೊಂದಿಗೆ ಕೆಲವರು ತರಬೇತಿ ಪಡೆಯದಿದ್ದರೂ ನಾಡ ರಕ್ಷಣೆಗಾಗಿ ಹೋರಾಡಲು ಸಿದ್ಧರಾದರು. ಕೊನೆಗೆ ರಾಣಿಯು ತನ್ನ ಆನೆಯಾದ ಸರ್ಮನ ಮೇಲೆ ಸವಾರಿ ಮಾಡಿ ಯುದ್ಧಕ್ಕೆ ಬಂದಳು. ಆಕೆಯ ಮಗ ವೀರ ನಾರಾಯಣ ಕೂಡ ಈ ಯುದ್ಧದಲ್ಲಿ ಭಾಗವಹಿಸಿದನು. ಅವರು ಆಕ್ರಮಣಕಾರಿ ಮೊಘಲ್ ಸೈನ್ಯವನ್ನು ಮೂರು ಬಾರಿ ಹಿಂದಕ್ಕೆ ಸರಿಸಲು ಪ್ರಯತ್ನಿಸಿದರೂ ಸೈನ್ಯ ಮುಂದಿಟ್ಟ ಕಾಲನ್ನು ಹಿಂದೆಯಿಡಲಿಲ್ಲ. ಕೊನೆಗೆ ರಾಣಿಯ ಸೈನ್ಯ ಗಾಯಗೊಂಡು ಜರ್ಜರಿತವಾಯಿತು. ಯುದ್ಧದ ಸಮಯದಲ್ಲಿ, ರಾಣಿಯ ಕಿವಿಗೆ ಬಾಣ ತೀವ್ರವಾಗಿ ಚುಚ್ಚಿ ಗಾಯವಾಯಿತು. ಮತ್ತೊಂದು ಬಾಣ ಅವಳ ಕುತ್ತಿಗೆಯನ್ನು ಚುಚ್ಚಿತು. ಹೀಗಾಗಿ ಆಕೆ ಪ್ರಜ್ಞೆಯನ್ನು ಕಳೆದುಕೊಳ್ಳಬೇಕಾಯಿತು. ಪ್ರಜ್ಞೆ ಬಂದ ಮೇಲೆ ಸೋಲು ಸನ್ನಿಹಿತವಾಗಿದೆ ಎಂದು ಗ್ರಹಿಸಿದಳು. ಅವಳ ಮಾವುತ ಅವಳನ್ನು ಯುದ್ಧಭೂಮಿಯನ್ನು ತೊರೆಯಲು ಸಲಹೆ ನೀಡಿದರೂ ಆಕೆ ನಿರಾಕರಿಸಿದಳು. 24 ಜೂನ್ 1564ರಂದು ವಿದೇಶಿಗರ ವಶವಾಗುವುದನ್ನು ಒಲ್ಲದ ಆಕೆ ತನ್ನ ಕಠಾರಿ ತೆಗೆದುಕೊಂಡು ಪ್ರಾಣವನ್ನು ಅರ್ಪಿಸಿದಳು. ಅಪ್ರತಿಮ ಸಾಹಸ ತೋರಿಸಿದ ರಾಣಿಯ ಗುಣಗಳು ಸಾರ್ವಕಾಲಿಕ ಶ್ಲಾಘನೀಯ.

## ವಿನಾಶದಿಂದ ವಿಕಾಸದೆಡೆಗಿನ ಗಾಥೆ

ಲೇಹ್ ಲಡಾಖ್‌ನಲ್ಲಿ, ಯಾವುದೇ ವಿಪತ್ತುಗಳ ಅರಿವಿಲ್ಲದೆ ಸಿಹಿ ನಿದ್ರೆಯಲ್ಲಿ ಮಲಗಿದ್ದ ಜನರ ಮೇಲೆ ಮಧ್ಯರಾತ್ರಿ ಧಾರಾಕಾರವಾಗಿ ಸುರಿದ ಮಳೆಯ ಕಾರಣ ಜಲಪ್ರಳಯ ಬಂದೆರಗಿತು. 2010ರ ಆಗಸ್ಟ್ 5ರಂದು ಇದ್ದಕ್ಕಿದ್ದಂತೆ ಆದ ಮೇಘಸ್ಫೋಟದಿಂದ, ಪ್ರವಾಹದ ರೀತಿಯಲ್ಲಿ ಧುಮ್ಮಿಕ್ಕಿದ ನೀರು ರಸ್ತೆಗಳನ್ನು ಮತ್ತು ಹೊಲಗಳಲ್ಲಿ ಬೆಳೆದಿದ್ದ ಹಚ್ಚಹಸಿರು ಫಸಲುಗಳನ್ನು ನಾಶಪಡಿಸುವುದರ ಜೊತೆಗೆ, ತನ್ನೊಂದಿಗೆ ಬೃಹದಾಕಾರದ ಕಲ್ಲು ಬಂಡೆಗಳನ್ನೂ ಕೊಚ್ಚಿಕೊಂಡು ಬಂದಿತ್ತು. ನಿದ್ರೆಯಲ್ಲೇ ಜನರು ಮನೆಗಳ ಸಹಿತವಾಗಿ ಕೆಲವು ಕಿಲೋಮೀಟರ್‌ಗಳಷ್ಟು ದೂರ ಕೊಚ್ಚಿಕೊಂಡು ಹೋಗಿದ್ದರು. ಕೆಲವೇ ಗಂಟೆಗಳಲ್ಲಿ 600 ಕೋಟಿಯಷ್ಟು ನಷ್ಟವಾಗಿತ್ತು ಎಂದು ಆ ಸಮಯದಲ್ಲಿ ವಿಪತ್ತು ನಿರ್ವಹಣಾ ಅಧಿಕಾರಿಯಾಗಿದ್ದ ಜಗಮೀತ್ ತಪಕಾ ಅವರು ಹೇಳುತ್ತಾರೆ.

ಆದರೆ ನಿಜಕ್ಕೂ ಭಗವಂತನ ಕೃಪೆ ದೊಡ್ಡದು. ಹತ್ತಿರದಲ್ಲೇ ಚೋಗ್ಲಂಸರ್‌ನಲ್ಲಿ ನಡೆಯುತ್ತಿದ್ದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಾಥಮಿಕ ಶಿಕ್ಷಾ ವರ್ಗಕ್ಕೆ ಈ ಸಮಾಚಾರ ಮುಟ್ಟಿತು. ಶಿಕ್ಷಾ ವರ್ಗದ ತರಬೇತಿಯನ್ನು ಅಲ್ಲಿಗೇ ಸಮಾಪ್ತಿಗೊಳಿಸಿ, ಎಲ್ಲ ಸ್ವಯಂಸೇವಕರೂ ಸಂಕಷ್ಟಕ್ಕೆ ಒಳಗಾದವರ ಸಹಾಯಕ್ಕಾಗಿ ಲಡಾಖ್‌ಗೆ ಬಂದು ತಲುಪಿದರು, ತಮ್ಮ ಜೀವದ ಹಂಗು ತೊರೆದು ಆ ಸ್ವಯಂಸೇವಕರು 27 ಜೀವಗಳನ್ನು ರಕ್ಷಿಸಿ, ಪೀಡಿತ ಪರಿವಾರಗಳಿಗೆ ಭೋಜನ, ನೀರು, ಔಷಧಿ, ಸೊಳ್ಳೆಪರದೆ ಮತ್ತು ಹಾಸಿಗೆ ಇತ್ಯಾದಿಗಳ ವ್ಯವಸ್ಥೆಯನ್ನು ಕೂಡಲೇ ಮಾಡಿದರು. ಇಷ್ಟೇ ಅಲ್ಲ, ಸೇವಾಭಾರತಿಯು ಲಡಾಖ್ ಕಲ್ಯಾಣ ಸಂಘದ ಜೊತೆ ಸೇರಿ, ಜನರನ್ನು ಸ್ವಾವಲಂಬಿಗಳನ್ನಾಗಿ ಮಾಡಲು ಉದ್ಯೋಗ ತರಬೇತಿ ನೀಡುವ ಕಾರ್ಯವನ್ನೂ ಪ್ರಾರಂಭಿಸಿತು.




ಐದು ಕಣಿವೆಗಳಿಂದ ಸುತ್ತುವರೆದಿರುವ ಲೇಹ್ ಲಡಾಖ್‌ನ ಸೌಂದರ್ಯ ಎಲ್ಲರನ್ನೂ ಆಕರ್ಷಿಸುತ್ತದೆ. ಆದರೆ ವರ್ಷದ 12 ತಿಂಗಳೂ ಹಿಮಾಚ್ಛಾದಿತ ಪರ್ವತಗಳಿಂದ ಆವೃತವಾಗಿರುವ ಲಾಮಾಗಳ ಈ ನಾಡಿನಲ್ಲಿ ಯಾವಾಗಲೂ ತೀವ್ರವಾದ ಚಳಿ ಇರುತ್ತದೆ. ಹಾಗಾಗಿ ಇಲ್ಲಿ ಸ್ವಾವಲಂಬನೆ ಮತ್ತು ಪುನರ್ವಸತಿ ಬಹಳ ಕಠಿಣವಾಗಿಬಿಡುತ್ತದೆ. ಆದ್ದರಿಂದ ಸಣ್ಣ ಸಣ್ಣ ಉದ್ಯೋಗಿಗಳಿಗೆ ಸಾಧನಗಳನ್ನು ಕಲ್ಪಿಸುವುದರ ಮೂಲಕ ಕಾರ್ಯವನ್ನು ಪ್ರಾರಂಭ ಮಾಡಲಾಯಿತು. ಕ್ಷೌರಿಕರಿಗೆ ಕ್ಷೌರ ಮಾಡುವ ಕುರ್ಚಿ, ಟೈಲರ್‌ಗಳಿಗೆ ಹೊಲಿಯುವ ಯಂತ್ರ, ಢಾಭಾ ಮಂದಿಗೆ ಪಾತ್ರೆಗಳು ಮತ್ತು ಬಡಗಿಗಳಿಗೆ ಉಪಕರಣಗಳನ್ನು ಕೊಡಲಾಯಿತು. ಲಡಾಖ್‌ನಲ್ಲಿ ಹರಿಯುವ ನೀರಿನಿಂದ ನಡೆಯುವ ರೈನ್‌ಟೆಕ್ ಯಂತ್ರಗಳಿಂದ ಗೃಹಿಣಿಯರು ಗೋಧಿ ಮತ್ತು ಬಾರ್ಲಿಯ ಹಿಟ್ಟನ್ನು ಮಾಡುತ್ತಿದ್ದರು. ಆದರೆ ಪ್ರವಾಹದಲ್ಲಿ 250 ರೈನ್‌ಟೆಕ್ ಯಂತ್ರಗಳು ಕೊಚ್ಚಿ ಹೋಗಿದ್ದರಿಂದ ಸೇವಾಭಾರತಿಯು 90 ಜನರಿಗೆ ರೈನ್‌ಟೆಕ್ ಯಂತ್ರಗಳನ್ನೂ ಒದಗಿಸಿತು.

ಕೇವಲ ಚೋಗ್ಲಂಸರ್ ಒಂದರಲ್ಲೇ 240 ಮನೆಗಳು ಕೊಚ್ಚಿ ಹೋಗಿದ್ದವು. ಅನೇಕ ಸ್ವಯಂಸೇವಾ ಸಂಘಟನೆಗಳು ಪರಿಹಾರ ಕಾರ್ಯಗಳು ಮುಗಿದ ಮೇಲೆ ತಮ್ಮ ಹಾಸಿಗೆ ಸಾಮಾನುಗಳನ್ನು ಕಟ್ಟಿಕೊಂಡು ಹೊರಟರು. ಆದರೆ ಸೇವಾಭಾರತಿಯು ನಿರಾಶ್ರಿತರಿಗೆ ಮನೆಗಳನ್ನು ನಿರ್ಮಿಸಿ ಕೊಡಬೇಕೆಂದು ನಿಶ್ಚಯಿಸಿತು. ಇಷ್ಟೇ ಅಲ್ಲ, ಚೋಗ್ಲಂಸರ್‌ನಲ್ಲಿ ಸ್ಥಳಾಂತರಿಸಲಾದವರಿಗೆ ಹಿಲ್ ಕೌನ್ಸಿಲ್ ಮೂಲಕ ನಿರ್ಮಿಸಲಾಗುತ್ತಿದ್ದ ಸೋಲರ್ ಕಾಲನಿಯಲ್ಲಿ ಸೇವಾಭಾರತಿಯು ಒಂದು ಮೆಡಿಕಲ್ ಹೆಲ್ಪ್ ಸೆಂಟರ್ ಮತ್ತು ಬಹುಉಪಯೋಗಿ ಸೇವಾ ಗೃಹವನ್ನು ನಿರ್ಮಿಸಿತು

ಪ್ರಾಥಮಿಕ ಶಿಕ್ಷಾ ವರ್ಗಕ್ಕೆ ಬಂದಿದ್ದ ಸಂಘದ ಸ್ವಯಂಸೇವಕರು ಒಂದು ಕ್ಷಣವೂ ವ್ಯರ್ಥ ಮಾಡದೆ ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಸಹಾಯ ಮಾಡುವುದರಲ್ಲಿ ಮಗ್ನರಾದರು ಹಾಗೂ 27 ವ್ಯಕ್ತಿಗಳ ಜೀವವನ್ನು ಉಳಿಸಿರುವುದು ಸಂಘದ ಶಾಖೆಗಳಲ್ಲಿ ದೊರೆತ ಸಂಸ್ಕಾರವನ್ನು ತೋರಿಸುತ್ತದೆ ಎಂದು ಅಂದಿನ ವಿಭಾಗ ಕಾರ್ಯವಾಹರಾಗಿದ್ದ ಬಿಜಾಯ್ ಚಿಗಲಮತ್ತಾ ಹೇಳುತ್ತಾರೆ. ದುರಂತ ಸಂಭವಿಸಿ ದಶಕಗಳೇ ಕಳೆದರೂ ಸಂತ್ರಸ್ತ ಕುಟುಂಬಗಳಿಗಾಗಿ ಹಲವು ಸೇವಾ ಕಾರ್ಯಗಳು ನಿರಂತರವಾಗಿ ನಡೆಯುತ್ತಿವೆ.

ಸಂಪರ್ಕ: ಜಯದೇವ ಸಿಂಹ, ಮೊಬೈಲ್: 91–94180 05256

## ‘ಇಂಡಿಯಾಸ್ ಸ್ಟ್ರಾಟೆಜಿಕ್ ವಿಶನ್’

**ಪ್ರಕಾಶನ:** ವಿಶ್ವ ಸಂವಾದ ಕೇಂದ್ರ, ಕರ್ನಾಟಕ
**ಸಂಪಾದಕರು:** ಪ್ರಶಾಂತ್ ವೈದ್ಯರಾಜ್, ಡಾ. ನಂದಕಿಶೋರ್
**ಬೆಲೆ:** ರೂ.150

ಪುಸ್ತಕ ಪರಿಚಯ

ಜಾಗತಿಕ ಶಕ್ತಿಯ ಚಿಂತನೆ, ವಿಶ್ಲೇಷಣೆ ಹಾಗೂ ಅಂತರರಾಷ್ಟ್ರೀಯ ಸಹಕಾರದ ಪ್ರಾಮುಖ್ಯತೆಯನ್ನು ಪ್ರಸ್ತುತಪಡಿಸಿರುವ ಪುಸ್ತಕ ಇಂಡಿಯಾಸ್ ಸ್ಟ್ರಾಟೆಜಿಕ್ ವಿಶನ್. ಅಂತರರಾಷ್ಟ್ರೀಯ ವ್ಯವಹಾರಗಳ ವಿವಿಧ ಕ್ಷೇತ್ರಗಳ ಕ್ಲಿಷ್ಟಕರ ವಿಷಯಗಳನ್ನು 120 ಪುಟಗಳಲ್ಲಿ, 20 ಸರಳ ಲೇಖನಗಳ ಮೂಲಕ ಓದುಗರ ಮುಂದಿರಿಸಿದೆ. ಪ್ರಸ್ತುತ ಭಾರತದ ವಿದೇಶಾಂಗ ನೀತಿಯ ಮಾದರಿಯಲ್ಲಿನ ಗಮನಾರ್ಹ ಬದಲಾವಣೆಯನ್ನು ಬಹಳ ಅಚ್ಚುಕಟ್ಟಾಗಿ ಈ ಪುಸ್ತಕದಲ್ಲಿ ನೀಡಲಾಗಿದೆ.




ಬಹುಧ್ರುವೀಯ ರೂಪವನ್ನು ಪಡೆದಿರುವ ಇಂದಿನ ಪ್ರಪಂಚದಲ್ಲಿ ವಿದೇಶಾಂಗ ನೀತಿಯನ್ನು ರೂಪಿಸುವುದರ ಹಿಂದಿನ ಕಾರ್ಯತಂತ್ರ ಸ್ವಾಯತ್ತವಾಗಿರಬೇಕಾದ ಅಗತ್ಯತೆಯನ್ನೂ, ಅಮೃತ ಕಾಲದಲ್ಲಿ ಭಾರತದ ಸಾಧನೆಗೆ ವಿದೇಶಾಂಗ ನೀತಿಗಳು ಬೆನ್ನೆಲುಬಾಗಿ ನಿಲ್ಲುವ ಅಂಶಗಳ ಕುರಿತು ಅರ್ಥಪೂರ್ಣ ವಿಶ್ಲೇಷಣೆಗಳನ್ನೂ ಒಳಗೊಂಡಿದೆ.

ಜಾಗತಿಕ ಶಕ್ತಿಯ ಅಧಿಕಾರದ ಪೈಪೋಟಿಯ ನಡುವೆಯೂ G20, WTO, SCO, BRICS ಮುಂತಾದ ಬಹುಪಕ್ಷೀಯ ಸಂಸ್ಥೆಗಳಲ್ಲಿ ಇಷ್ಟು ವರ್ಷಗಳ ಕಾಲ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಭಾರತವು ಮುಂಚೂಣಿಗೆ ಬರಲು ಪಟ್ಟ ಪ್ರಯಾಸದ ಬಗ್ಗೆ ಅದ್ಭುತವಾಗಿ ವಿವರಿಸಲಾಗಿದೆ.

ಭಾರತವು ತನ್ನ ‘ಸ್ವ’ ಆಧಾರಿತ ವಿದೇಶಾಂಗ ನೀತಿ ಕಡೆಗೆ ನಡೆಯುತ್ತಿರುವ ಬಗೆಗಿನ ರೋಮಾಂಚನಕಾರಿ ವಿಶ್ಲೇಷಣೆ, ಭಾರತದ ಆರ್ಥಿಕ ರಾಜನೀತಿ ತಂತ್ರ, ರಕ್ಷಣಾ ರಾಜತಾಂತ್ರಿಕತೆ ಮುಂತಾದವುಗಳ ದೃಷ್ಟಿಕೋನವನ್ನು ಸಾದರಪಡಿಸಲಾಗಿದೆ. ಭಾರತದ ವಿದೇಶಾಂಗ ನೀತಿಯಲ್ಲಿ ಚೀನಾವನ್ನು ಸೂಕ್ಷ್ಮವಾಗಿ ಅರಿಯುವುದರ ಅನಿವಾರ್ಯ, ಜಗತ್ತನ್ನು ಮರುಳುಗೊಳಿಸುವ ಚೀನಾದ ಪ್ರಯತ್ನ, ಶಿಕ್ಷಣವನ್ನು ಅಸ್ತ್ರವಾಗಿಸಿಕೊಂಡಿರುವ ಬಗ್ಗೆ, ತನ್ನ ತಂತ್ರಜ್ಞಾನದ ಮೂಲಕ ಹುಟ್ಟಿಸಿರುವ ಸೈಬರ್ ಭೀತಿ, ಇವುಗಳ ಕುರಿತು ವಿಸ್ತೃತ ಸಾರಾಂಶವನ್ನು ತಿಳಿಸಿಕೊಡಲಾಗಿದೆ. ಇದರ ಜೊತೆಜೊತೆಗೆ ಭಾರತ ಒಂದು ರಾಷ್ಟ್ರವಾಗಿ ಇಂತಹ ಸೈಬರ್ ಭೀತಿಯನ್ನು ಸಮರ್ಥವಾಗಿ ಎದುರಿಸಲು ತೆಗೆದುಕೊಂಡಿರುವ ನಡೆಗಳ ಬಗ್ಗೆ ಹೇಳಲಾಗಿದೆ.

ಅಮೇರಿಕಾ, ರಷ್ಯ, ಚೀನಾ ಈ ಮೂರು ದೇಶಗಳ ನಡುವಿನ ತಿಕ್ಕಾಟದ ನಡುವೆಯೂ ಭಾರತ ತನ್ನ ರಾಜತಾಂತ್ರಿಕ ನಡೆಗಳ ಮೂಲಕ ಯಾವುದೇ ಗೊಡ್ಡು ಬೆದರಿಕೆಗಳಿಗೆ ರಾಜಿ ಮಾಡಿಕೊಳ್ಳದೆ ಮೂರೂ ರಾಷ್ಟ್ರಗಳ ನಡುವೆ ಹೊಂದಿರುವ ಸಮನ್ವಯದ ನೀತಿಯ ಕುರಿತು ಅರಿಯುವುದಕ್ಕೆ ಪುಸ್ತಕದ ಲೇಖನಗಳು ಸಹಕಾರಿ.
ಪುಸ್ತಕಕ್ಕಾಗಿ ಸಂಪರ್ಕಿಸಿ: 6360581957

## ಸಾರ್ವಜನಿಕ ಸ್ವತ್ತುಗಳ ಸಂರಕ್ಷಣೆಯ ಕರ್ತವ್ಯಭಾವ

ನಾಗರಿಕ ಶಿಷ್ಟಾಚಾರ

ಪ್ರತಿ ರಾಷ್ಟ್ರದ ನಾಗರಿಕರೂ ತಮ್ಮ ಸಾರ್ವಜನಿಕ ಜೀವನ ಚೆನ್ನಾಗಿರಲು ಬಯಸುತ್ತಾರೆ. ಅದಕ್ಕೆ ತಕ್ಕಂತೆ ಸೌಲಭ್ಯಗಳನ್ನು ಆ ನಾಡಿನ ವ್ಯವಸ್ಥೆಗಳಿಂದ ಪಡೆಯಲು ಬಯಸುತ್ತಾರೆ. ತಮ್ಮ ವ್ಯಾಪಾರ ವ್ಯವಹಾರಗಳಿಗೆ ಸಹಕಾರಿಯಾಗುವ ರಸ್ತೆಗಳು, ಮೂಲಸೌಕರ್ಯಗಳಾದ ಬೀದಿದೀಪಗಳು, ನಲ್ಲಿನೀರು, ನಾಮಫಲಕಗಳು, ಸಾರ್ವಜನಿಕ ಶೌಚಾಲಯಗಳು, ಬಸ್ ನಿಲ್ದಾಣಗಳು, ರೈಲ್ವೇನಿಲ್ದಾಣಗಳು, ವಿಮಾನ ನಿಲ್ದಾಣಗಳು, ಸರ್ಕಾರಿ ಶಾಲೆಗಳು, ಕಛೇರಿಗಳು ಸೇರಿದಂತೆ ಇನ್ನೂ ಅನೇಕ ವ್ಯವಸ್ಥೆಗಳು ಸರಿಯಾಗಿರಲು ಬಯಸುತ್ತಾರೆ. ಅನೇಕ ಸಂದರ್ಭಗಳಲ್ಲಿ ಈ ಎಲ್ಲಾ ವ್ಯವಸ್ಥೆಗಳನ್ನು ಒಂದೊಂದಾಗಿಯಾದರೂ ಸಾರ್ವಜನಿಕರಿಗೆ ಉಪಯೋಗವಾಗುವಂತೆ ಮಾಡುವ ಕಾರ್ಯ ಸರ್ಕಾರದಿಂದಾಗಲಿ, ಇತರೆ ಸಂಘಸಂಸ್ಥೆಗಳಿಂದಾಗಲಿ ಆಗುತ್ತದೆ. ಬೇಕಾದ ವ್ಯವಸ್ಥೆಗಳು ದೊರೆತ ನಂತರ ಆ ವ್ಯವಸ್ಥೆಯನ್ನು ಸದುಪಯೋಗಪಡಿಸಿಕೊಂಡು ಅದರ ಸಂರಕ್ಷಣೆ ಮಾಡುವಲ್ಲಿ ತಮ್ಮ ಜವಾಬ್ದಾರಿಯನ್ನು ಮರೆತು ಬಿಡುತ್ತಾರೆ. ತಮ್ಮ ಸ್ವಭಾವದಲ್ಲಿನ ದೋಷಗಳ ಕಾರಣದಿಂದಾಗಿ ಸಾರ್ವಜನಿಕ ಸ್ವತ್ತುಗಳಾದ ಬೀದಿ ದೀಪಗಳ ಹಾನಿ, ಪ್ರತಿಭಟನೆಯ ಹೆಸರಲ್ಲಿ ಸಾರ್ವಜನಿಕ ವಾಹನಗಳ ಮೇಲೆ ಕಲ್ಲು ತೂರಾಟ, ಸಾರ್ವಜನಿಕ ಶೌಚಾಲಯದ ಸ್ವಚ್ಛತೆಗೆ ಮಹತ್ವ ನೀಡದೇ ಇರುವುದು, ರಸ್ತೆಗಳಲ್ಲಿ ವೈಯಕ್ತಿಕ ಕಾರಣಗಳಿಗಾಗಿ ಹಾಳುಗೆಡುವುದು, ಸರ್ಕಾರಿ ಶಾಲೆಗಳನ್ನು ಅನ್ಯ ದುವರ್ತನೆಯ ತಾಣಗಳನ್ನಾಗಿಸಿಕೊಳ್ಳುವುದು ಇತ್ಯಾದಿ. ಸಾರ್ವಜನಿಕ ಸ್ವತ್ತುಗಳು ನಮ್ಮದೇ ಸ್ವತ್ತು ಎನ್ನುವುದರ ಜೊತೆಗೆ ಅದನ್ನು ಮುಂದಿನ ಪೀಳಿಗೆಗೂ ಉಪಯುಕ್ತ ರೀತಿಯಲ್ಲಿ ಹಸ್ತಾಂತರಿಸಬೇಕು ಎಂಬ ಜವಾಬ್ದಾರಿಗೆ ತಕ್ಕಂತೆ ನಮ್ಮ ಸ್ವಭಾವ ಇರಬೇಕು. ನಮ್ಮ ಮನೆ, ನಮ್ಮ ಸಮಾಜ, ನಮ್ಮ ರಾಷ್ಟ್ರ ಎಂಬ ಭಾವ ಜಾಗೃತವಾದಾಗ ಮಾತ್ರ ಎಲ್ಲವನ್ನು ಸಂರಕ್ಷಿಸಬೇಕು ಎಂಬ ಸ್ವಭಾವವೂ ಜಾಗೃತವಾಗುತ್ತದೆ.




ಸಂಪಾದಕೀಯ ಸಹಕಾರ: ಕ್ಷಮಾ ನರಗುಂದ, ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯ್ ಕೃಷ್ಣ ಹೆಚ್.ವಿ., ರೂಪಶ್ರೀ ನಾಗರಾಜ್, ಪಂಚಮಿ ಬಾಕಿಲಪದವು


# ಸಾಲುದ್ದದ ಸುದ್ದಿಗಳು

## ಚಂಡಮಾರುತ ಪೀಡಿತ ವಿಯೆಟ್ನಾಂಗೆ ಭಾರತದಿಂದ ನೆರವು



ಮಾರಣಾಂತಿಕ ಮತ್ತು ವಿನಾಶಕಾರಿ ಚಂಡಮಾರುತ ಯಾಗಿ ಟೈಫೂನ್ನಿಂದ ಪೀಡಿತ ಆಗ್ನೇಯ ಏಷ್ಯಾದ ದೇಶಗಳಿಗೆ ಮಾನವೀಯ ನೆರವು ನೀಡಲು ಕೇಂದ್ರ ಸರ್ಕಾರ "ಆಪರೇಷನ್ ಸದ್ಭಾವ" ಅನ್ನು ಕೈಗೊಂಡಿತ್ತು. "ಆಪರೇಷನ್ ಸದ್ಭಾವ" ಅಡಿಯಲ್ಲಿ, ನೈಸರ್ಗಿಕ ವಿಕೋಪದಿಂದ ಪ್ರಭಾವಿತವಾಗಿರುವ ಉತ್ತರ ವಿಯೆಟ್ನಾಂನ ಪೀಡಿತ ಸಮುದಾಯಗಳಿಗೆ ಪರಿಹಾರವನ್ನು ಒದಗಿಸಲು ಭಾರತವು ವಿಯೆಟ್ನಾಂ ಸರ್ಕಾರಕ್ಕೆ ನೆರವನ್ನು ಒದಗಿಸುತ್ತಿದೆ. ನೀರು ಶುದ್ಧೀಕರಣದ ವಸುಗಳು, ನೀರಿನ ಪಾತ್ರೆಗಳು, ಹೊದಿಕೆಗಳು, ಅಡುಗೆ ಪಾತ್ರೆಗಳು ಮತ್ತು ಸೌರ ಲ್ಯಾಂಟರ್ನ್‌ಗಳು ಸೇರಿದಂತೆ 35 ಟನ್‌ಗಳ ಮಾನವೀಯ ನೆರವಿನ ರವಾನೆಯನ್ನು ವಿಶೇಷ ವಿಮಾನದ ಮೂಲಕ ಇಂದು ವಿಯೆಟ್ನಾಂಗೆ ಸಾಗಿಸಲಾಗಿದೆ.

## VL-SRSAM ಕ್ಷಿಪಣಿ ಪರೀಕ್ಷೆ ಯಶಸ್ವಿ



ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಮತ್ತು ಭಾರತೀಯ ನೌಕಾಪಡೆ ಜಂಟಿಯಾಗಿ ನಡೆಸಿದ VL-SRSAM ಕ್ಷಿಪಣಿ ಪರೀಕ್ಷೆ ಯಶಸ್ವಿಯಾಗಿದೆ. ಕ್ಷಿಪಣಿ ಪರೀಕ್ಷೆಯು ಎಲ್ಲಾ ಅಗತ್ಯ ಕಾರ್ಯಕ್ಷಮತೆಯ ನಿಯತಾಂಕಗಳನ್ನು ಪೂರೈಸಿದೆ. VL-SRSAM, ಹಡಗಿನ ಮೂಲಕ ಹರಡುವ ಆಯುಧ ವ್ಯವಸ್ಥೆ, ಸಮುದ್ರದ ಸ್ಕಿಮ್ಮಿಂಗ್ ಗುರಿಗಳನ್ನು ಒಳಗೊಂಡಂತೆ ಹತ್ತಿರದ ವ್ಯಾಪ್ತಿಯಲ್ಲಿ ವಿವಿಧ ವೈಮಾನಿಕ ಬೆದರಿಕೆಗಳನ್ನು ತಟಸ್ಥಗೊಳಿಸಲು ವಿನ್ಯಾಸಗೊಳಿಸಲಾಗಿದೆ. ಈ ಕ್ಷಿಪಣಿಯು ಸ್ವದೇಶಿ ರೇಡಿಯೋ ಫ್ರೀಕ್ವೆನ್ಸಿ ಸೀಕರ್ (RF ಸೀಕರ್) ಅನ್ನು ಹೊಂದಿದ್ದು ಅದರ ನಿಖರತೆಯನ್ನು ಹೆಚ್ಚಿಸುತ್ತದೆ. ಕಡಿಮೆ ಎತ್ತರದಲ್ಲಿ ಹಾರುವ ಗುರಿಗಳನ್ನು ಹೊಡೆದು ಹಾಕಲು ಇದು ಸಮರ್ಥವಾಗಿದೆ.

## ಭಾರತದ 55% ಮೊಬೈಲ್ ಫೋನ್‌ಗಳು ಯುಪಿಯಲ್ಲಿ ಉತ್ಪಾದನೆ

ಐಟಿ ವಲಯ, ಸೆಮಿಕಂಡಕ್ಟರ್‌ಗಳು, ಡೇಟಾ ಸೆಂಟರ್‌ಗಳು ಮತ್ತು ಎಲೆಕ್ಟ್ರಾನಿಕ್ಸ್ ತಯಾರಿಕೆಯಲ್ಲಿ ಯುಪಿ ಪ್ರಗತಿ ಸಾಧಿಸಿದೆ. ಇದರ ಪರಿಣಾಮವಾಗಿ ದೇಶದ ಶೇ. 55 ರಷ್ಟು ಮೊಬೈಲ್ ಉತ್ಪಾದನೆ ಮತ್ತು ಶೇ 50 ರಷ್ಟು ಮೊಬೈಲ್ ಘಟಕಗಳ ತಯಾರಿಕೆ ಯುಪಿಯಲ್ಲಿ ನಡೆಯುತ್ತಿದೆ. ಉತ್ತರ ಪ್ರದೇಶ ಗ್ರಾಹಕ ಎಲೆಕ್ಟ್ರಾನಿಕ್ಸ್‌ನ ಪ್ರಮುಖ ರಫ್ತುದಾರನಾಗಿ ಮಾರ್ಪಟ್ಟಿದೆ. ಏಷ್ಯಾದ ಅತಿದೊಡ್ಡ ಮೊಬೈಲ್ ಉತ್ಪಾದನಾ ಘಟಕವನ್ನು ನೋಯ್ಡಾದಲ್ಲಿ ನಿರ್ವಹಿಸುತ್ತಿರುವ ಸ್ಯಾಮ್‌ಸಂಗ್, ನಗರದಲ್ಲಿ ಡಿಸ್ಪ್ಲೇ ಘಟಕ ಸೌಲಭ್ಯದಲ್ಲಿ ಹೂಡಿಕೆ ಮಾಡಿದೆ.

## 90 ದೇಶಗಳಿಗೆ ರಕ್ಷಣಾ ಸಾಧನಗಳನ್ನು ರಫ್ತು ಮಾಡುತ್ತಿದೆ ಭಾರತ

ಭಾರತವು ರಕ್ಷಣಾ ಕ್ಷೇತ್ರದಲ್ಲಿ ಸ್ವಾವಲಂಬಿಯಾಗುತ್ತಿದೆ ಮಾತ್ರವಲ್ಲದೆ ಸುಮಾರು 90 ದೇಶಗಳಿಗೆ ರಕ್ಷಣಾ ಸಾಧನಗಳನ್ನು ರಫ್ತು ಮಾಡುತ್ತಿದೆ. ಇಂತಹ ವ್ಯಾಯಾಮಗಳು ಸೌಹಾರ್ದ ರಾಷ್ಟ್ರಗಳ ನಡುವೆ ಪರಸ್ಪರ ಸಹಕಾರ ಮತ್ತು ಸಮನ್ವಯವನ್ನು ಉತ್ತೇಜಿಸುತ್ತದೆ.ಶಸ್ತ್ರಾಸ್ತ್ರಗಳು, ಪ್ಲಾಟ್‌ಫಾರ್ಮ್‌ಗಳು ಮತ್ತು ವಿಮಾನಗಳನ್ನು ಸ್ವದೇಶೀಕರಿಸುವಲ್ಲಿ ಭಾರತವು ಗಮನಾರ್ಹ ಪ್ರಗತಿಯನ್ನು ಸಾಧಿಸಿದೆ ಮತ್ತು ಲಘು ಯುದ್ಧ ವಿಮಾನಗಳು, ಸಂವೇದಕಗಳು, ರಾಡಾರ್‌ಗಳು ಮತ್ತು ಎಲೆಕ್ಟ್ರಾನಿಕ್ ವಾರ್‌ಫೇರ್‌ನಂತಹ ಕ್ಷೇತ್ರಗಳಲ್ಲಿ ಹೆಚ್ಚಾಗಿ ಸ್ವಾವಲಂಬಿಯಾಗುತ್ತಿದೆ ಎಂದು ಕೇಂದ್ರ ರಕ್ಷಣ ಸಚಿವ ರಾಜ್ ನಾಥ್ ಸಿಂಗ್ ರಾಜಸ್ಥಾನದ ಜೋಧ್‌ಪುರದಲ್ಲಿ ನಡೆದ ಅತಿದೊಡ್ಡ ಬಹುಪಕ್ಷೀಯ ರಕ್ಷಣಾ ವಾಯು ವ್ಯಾಯಾಮ 'ತರಂಗ್ ಶಕ್ತಿ'ಯಲ್ಲಿ ತಿಳಿಸಿದರು.

## 70 ವರ್ಷ ಮೇಲ್ಪಟ್ಟ ಪ್ರತಿ ಹಿರಿಯ ನಾಗರಿಕರಿಗೆ ಆರೋಗ್ಯ ರಕ್ಷಣೆ: ಕೇಂದ್ರದ ನಿರ್ಧಾರ

ರಾಷ್ಟ್ರೀಯ ವಿಮಾ ಯೋಜನೆ ಆಯುಷ್ಮಾನ್ ಭಾರತ್ ಅಡಿಯಲ್ಲಿ 70 ಮತ್ತು ಅದಕ್ಕಿಂತ ಮೇಲ್ಪಟ್ಟ ಪ್ರತಿಯೊಬ್ಬ ಹಿರಿಯ ನಾಗರಿಕರಿಗೆ ಆರೋಗ್ಯ ರಕ್ಷಣೆಯನ್ನು ನೀಡುವ ಮಹತ್ವದ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರ ಅನುಮೋದಿಸಿದೆ. ಕೇಂದ್ರದ ಈ ನಿರ್ಧಾರದಿಂದ ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ (ಎಬಿ ಪಿಎಂ–ಜೆಎವೈ)ಗೆ ಒಳಪಟ್ಟಿರುವ ಆರು ಕೋಟಿ ಹಿರಿಯ ನಾಗರಿಕರನ್ನು ಹೊಂದಿರುವ 4.5 ಕೋಟಿ ಕುಟುಂಬಗಳಿಗೆ ಪ್ರಯೋಜನವಾಗಲಿದೆ. ಎಬಿ ಪಿಎಂ–ಜೆಎವೈ ವ್ಯಾಪ್ತಿಗೆ ಒಳಪಡುವ ಕುಟುಂಬಗಳಿಗೆ ಸೇರಿದ 70 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು ವರ್ಷಕ್ಕೆ 5 ಲಕ್ಷ ರೂಪಾಯಿವರೆಗೆ ಹೆಚ್ಚುವರಿ ಟಾಪ್–ಅಪ್ ಕವರ್ ಅನ್ನು ಪಡೆಯುತ್ತಾರೆ.

## ತೇಜಸ್ ಹಾರಿಸುವ ಮೂಲಕ ಇತಿಹಾಸ ನಿರ್ಮಿಸಿದ ಮಹಿಳಾ ಪೈಲಟ್ ಮೋಹನಾ ಸಿಂಗ್





ಸ್ವದೇಶಿ ನಿರ್ಮಿತ ಲಘು ಯುದ್ಧ ವಿಮಾನ (ಎಲ್‌ಸಿಎ) ತೇಜಸ್‌ನ ಯಶಸ್ವಿ ಹಾರಾಟ ನಡೆಸುವ ಮೂಲಕ ಸ್ಕ್ವಾಡ್ರನ್ ಲೀಡರ್ ಮೋಹನಾ ಸಿಂಗ್ ಅವರು ಫೈಟರ್ ಜೆಟ್‌ನ ಸ್ಕ್ವಾಡ್ರನ್ ಅನ್ನು ನಿರ್ವಹಿಸುವ ವಾಯುಪಡೆಯ ಎಲೈಟ್ 18 ಫ್ಲೈಯಿಂಗ್ ಬುಲೆಟ್ಸ್ ಸ್ಕ್ವಾಡ್ರನ್‌ಗೆ ಸೇರ್ಪಡೆಗೊಂಡ ಮೊದಲ ಮಹಿಳಾ ಫೈಟರ್ ಪೈಲಟ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಮೋಹನಾ ಸಿಂಗ್ ಅವರ ಈ ಐತಿಹಾಸಿದ ಸಾಧನೆ ಮಹಿಳಾ ಸಬಲೀಕರಣಕ್ಕೆ ಭಾರತೀಯ ವಾಯುಪಡೆಯ ಬದ್ಧತೆ ಅನಾವರಣಗೊಂಡಿದೆ. ಇತ್ತೀಚೆಗೆ ಜೋಧಪುರದಲ್ಲಿ ನಡೆದ ತರಂಗ್ ಶಕ್ತಿ ವಾಯು ಸಮರಾಭ್ಯಾಸದಲ್ಲಿ ಭಾಗವಹಿಸಿದ್ದ ಅವರು, ಮೂರು ಪಡೆಗಳ ಮೂವರು ಉಪಮುಖ್ಯಸ್ಥರ ಐತಿಹಾಸಿಕ ಹಾರಾಟದ ಭಾಗವಾಗಿದ್ದರು.

# ಪರಿಶ್ರಮದ ಬೇಗೆಯಲ್ಲಿ ಬೆಂದು ಸಾಧನೆಯ 'ಶೀತಲ' ಶಿಖರವೇರಿದ ದೇವಿ–ಶೀತಲ್ ದೇವಿ

ಜೀವನದಲ್ಲಿ ಛಲವೊಂದಿದ್ದರೆ ಎಂತಹ ಕಠಿಣ ಗುರಿಯನ್ನೂ ಸುಲಭವಾಗಿ ತಲುಪಬಹುದು. ಛಲದೆದುರು ನ್ಯೂನತೆಗಳು ಕಾರಣವಾಗುವುದಿಲ್ಲ ಎನ್ನುವುದಕ್ಕೆ ಪ್ರತ್ಯಕ್ಷದರ್ಶಿ ಜಮ್ಮು ಮತ್ತು ಕಾಶ್ಮೀರದ ಕಿಶ್ತ್ವಾರ್ ಎಂಬ ಸಣ್ಣ ಹಳ್ಳಿಯ ನಿವಾಸಿ, ಪ್ಯಾರಾಲಿಂಪಿಕ್ಸ್ ಪದಕ ವಿಜೇತ ಕ್ರೀಡಾಪಟು ಶೀತಲ್ ದೇವಿ. ಫೋಕೊಮೆಲಿಯಾ ಎಂಬ ಜನ್ಮಜಾತ ಕಾಯಿಲೆಯಿಂದ ಬಳಲುತ್ತಿರುವ ಇವರಿಗೆ ಎರಡೂ ಕೈಗಳಿಲ್ಲ. ಆದರೆ ಸಾಧನೆಗೆ ಇದ್ಯಾವುದು ಲೆಕ್ಕಕ್ಕಿಲ್ಲ ಎಂಬುದನ್ನು ತಮ್ಮ ಬಿಲ್ಗಾರಿಕೆಯ ಚಾಕಚಕ್ಯತೆಯ ಮೂಲಕ ವಿಶ್ವಕ್ಕೆ ತೋರಿಸಿಕೊಟ್ಟಿದ್ದಾರೆ.

2007 ಜನವರಿ ಹತ್ತರಂದು ಜನಿಸಿದ ಈಕೆ, 2019 ರಂದು ತನ್ನ ಹುಟ್ಟೂರು ಕಿಶ್ತ್ವಾರ್ ನಲ್ಲಿ ಭಾರತೀಯ ಸೇನೆಯು ಆಯೋಜಿಸಿದ ಯುವ ಸಮಾರಂಭವೊಂದರಲ್ಲಿ, ಬಿಲ್ಲುಗಾರಿಕೆ ತರಬೇತುದಾರರಾದ ಅಭಿಲಾಶಾ ಚೌಧರಿ ಮತ್ತು ಕುಲದೀಪ್ ವಾಧ್ವಾನ್ ಅವರ ಗಮನವನ್ನು ಸೆಳೆದರು. ಅವರುಗಳು ಆತ್ಮವಿಶ್ವಾಸವನ್ನೇ ಉಸಿರಾಗಿಸಿದ ದೇವಿಯವರ ಛಲಕ್ಕಾಗಿ ಆಕೆಗೆ ಬಿಲ್ಲುಗಾರಿಕೆ ತರಬೇತಿಯನ್ನು ಪ್ರಾರಂಭಿಸಲು ನಿರ್ಧರಿಸಿದರು.

ದೇವಿ ಅವರು ಪ್ರಾರಂಭದಲ್ಲಿ ಭಾರದ ಬಿಲ್ಲನ್ನು ಕಾಲಿನಲ್ಲಿ ಹಿಡಿಯಲು ಬಹಳಷ್ಟು ಶ್ರಮ ವಹಿಸಿದರು. ಅದರಲ್ಲಿ ಹಿಡಿತ ಸಾಧಿಸಿದ ಬಳಿಕ ವಿಶೇಷ ಸಾಧನವನ್ನು ಬಾಯಲ್ಲಿ ಇಟ್ಟು ಅದರ ಮೂಲಕ ಬಾಣವನ್ನು ಗುರಿಯೆಡೆಗೆ ಇಡಲು ಅಭ್ಯಾಸ ಆರಂಭಿಸಿದರು. ಆರಂಭದಲ್ಲಿ ದಿನಕ್ಕೆ 50ರಿಂದ 100ರಷ್ಟು ಸಲ ಬಾಣ ಪ್ರಯೋಗಿಸುತ್ತಿದ್ದ ಅವರು ಬರಬರುತ್ತ ದಿನಕ್ಕೆ 300ರಷ್ಟು ಬಾಣ ಪ್ರಯೋಗಿಸುವಷ್ಟರ ಮಟ್ಟಿಗೆ ಬೆಳೆದಿರುವುದು ಅವರ ಶ್ರದ್ಧೆಗೆ ಹಿಡಿದ ಕೈಗನ್ನಡಿ. ಆರು ತಿಂಗಳ ನಂತರ, ಸೋನಿಪತ್‌ನಲ್ಲಿ ನಡೆದ ಪ್ಯಾರಾ ಓಪನ್ ನ್ಯಾಷನಲ್ಸ್‌ನಲ್ಲಿ ಶೀತಲ್ ಬೆಳ್ಳಿ ಗೆದ್ದರು ಮತ್ತು ಅಂಗವಿಕಲರಲ್ಲದ ಬಿಲ್ಲುಗಾರರ ವಿರುದ್ಧ ಓಪನ್ ನ್ಯಾಷನಲ್ಸ್‌ನಲ್ಲಿ ನಾಲ್ಕನೇ ಸ್ಥಾನ ಪಡೆದರು.



"ಯಾರಿಗೂ ಯಾವುದೇ ಮಿತಿಗಳಿಲ್ಲ ಎಂದು ನಾನು ನಂಬುತ್ತೇನೆ. ಯಾವುದಾದರೂ ಕನಸನ್ನು ಕಂಡು, ಆ ಕನಸನ್ನು ನನಸು ಮಾಡಲು ಸಾಧ್ಯವಾದಷ್ಟು ಕಷ್ಟಪಟ್ಟು ಕೆಲಸ ಮಾಡಬೇಕು. ನನಗೆ ಅದನ್ನು ಮಾಡಲು ಸಾಧ್ಯವಾಗಿದೆ. ಹಾಗಾಗಿ ಬೇರೆಯವರು ಕೂಡಾ ಸಾಧಿಸಬಹುದು" – ಶೀತಲ್ ದೇವಿ

11 ತಿಂಗಳ ತರಬೇತಿಯೊಳಗೆ, ದೇವಿ ಅವರು 2022ರ ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ಮಹಿಳೆಯರ ಸಂಯುಕ್ತ ಬಿಲ್ಲು ಸ್ಪರ್ಧೆಯಲ್ಲಿ ಸ್ಪರ್ಧಿಸಿದರು. ಡಬಲ್ಸ್ ಮತ್ತು ಮಹಿಳೆಯರ ವೈಯಕ್ತಿಕ ವಿಭಾಗದಲ್ಲಿ ಚಿನ್ನವನ್ನು ಪಡೆದರು. ಭಾರತಕ್ಕೆ ಎರಡು ಚಿನ್ನದ ಪದಕಗಳನ್ನು ಗೆದ್ದು ತಂದರು. ಜೊತೆಗೆ ಮಹಿಳೆಯರ ಡಬಲ್ ಕಾಂಪೌಂಡ್ ಈವೆಂಟ್‌ನಲ್ಲಿ ಬೆಳ್ಳಿ ಪದಕವನ್ನು ಗಳಿಸಿದರು. ಇದು ಮಹಿಳಾ ಕಾಂಪೌಂಡ್ ಓಪನ್‌ನಲ್ಲಿ ಪ್ಯಾರಾ ವಿಶ್ವ ಬಿಲ್ಲುಗಾರಿಕೆ ಶ್ರೇಯಾಂಕದಲ್ಲಿ ಅವರನ್ನು ಅಗ್ರಸ್ಥಾನಕ್ಕೆ ಏರಿಸಿತು. ಈ ಮೂಲಕ ದೇವಿ ಅವರು ಜಾಗತಿಕ ಮಟ್ಟದಲ್ಲಿ ವಿಶೇಷವಾದ ಛಾಪನ್ನು ಮೂಡಿಸಿದರು.

ದೇವಿ ಅವರ ನೆಚ್ಚಿನ ಹವ್ಯಾಸ ಯಾವುದೆಂದು ತಿಳಿದರೆ ನಿಜಕ್ಕೂ ಅಚ್ಚರಿಯಾಗುತ್ತದೆ. ಅವರಿಗೆ ಎರಡು ಕೈಗಳಿಲ್ಲ. ಆದರೆ ಮರವನ್ನೇರುವುದು ಅವರ ಇಷ್ಟದ ಹವ್ಯಾಸ. ತನ್ನ ಗ್ರಾಮದಲ್ಲಿರುವಾಗ ಅವರು ಕಾಲುಗಳ ಸಹಾಯದಿಂದ ಮರ ಏರುವ ಅಭ್ಯಾಸ ಮಾಡಿಕೊಂಡಿದ್ದರು. ಇದರಿಂದ ಅವರ ಕಾಲುಗಳು ಬಲಿಷ್ಠವಾಗಿ ರೂಪುಗೊಳ್ಳಲು ಸಹಾಯವಾಯಿತು. ಬಿಲ್ಲುಗಾರಿಕೆಯಲ್ಲಿಯೂ ಅಮಿತ ಪರಾಕ್ರಮವನ್ನು ಸಾಧಿಸಲು ಕಾರಣವಾಯಿತು.

ಹೀಗೆ ದೇವಿಯವರು ಕೈಗಳಿಲ್ಲದಿದ್ದರೂ ಪ್ಯಾರಾ ಏಷ್ಯನ್ ಗೇಮ್ಸ್‌ನಲ್ಲಿ ಪದಕ ಗೆಲ್ಲುವ ಮೂಲಕ ದೇಶದ ಕೀರ್ತಿ ಪತಾಕೆ ಹಾರಿಸಿದ್ದಾರೆ. ತನ್ನ ಪಾದಗಳಿಂದ ಬಿಲ್ಲುಗಾರಿಕೆ ಮಾಡಿ ಕಳೆದ ವರ್ಷ ಪ್ಯಾರಾ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನದ ಪದಕವನ್ನು ತಮ್ಮದಾಗಿಸಿಕೊಂಡಿದ್ದಾರೆ. 2024ರ ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ಮಿಕ್ಸಡ್ ಡಬಲ್ಸ್‌ನಲ್ಲಿ ಕಂಚಿನ ಪದಕವನ್ನೂ ಗೆದ್ದಿದ್ದಾರೆ. ಇವರ ಅಸಾಧಾರಣ ಸಾಧನೆಯನ್ನು ಗುರುತಿಸಿ ಶೀತಲ್ ದೇವಿ ಅವರಿಗೆ 2023ರ ಅರ್ಜುನ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಒಟ್ಟಿನಲ್ಲಿ ಶೀತಲ್ ದೇವಿ ಅವರ ಜೀವನಶೈಲಿ, ಪರಿಶ್ರಮ, ಬದುಕಿನ ಉತ್ಸಾಹ 'ಮಿತಿಗಳು ಗೆಲ್ಲಬೇಕೆಂಬ ಮತಿಗಳಿಗಲ್ಲ' ಎಂಬುದನ್ನು ಸ್ಪಷ್ಟಪಡಿಸಿದೆ. ಸಣ್ಣಪುಟ್ಟ ಕಾರಣಗಳಿಗೆ ಜೀವನೋತ್ಸಾಹವನ್ನು ಕಳೆದುಕೊಳ್ಳುವ, ಜೀವನವನ್ನೇ ಕೊನೆಗೊಳಿಸಲು ನಿರ್ಧರಿಸುವ ಅನೇಕರಿಗೆ ಬದುಕಲ್ಲಿ ಮತ್ತೊಮ್ಮೆ ಪುಟಿದೇಳುವ ಆತ್ಮಸ್ಥೈರ್ಯವನ್ನು ತುಂಬೀತು.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th SEPTEMBER 2024
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2024-2026 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26
FORTNIGHTLY 01-10-2024



## ಪೋರ್ಟ್‌ಬ್ಲೇರ್ ಅನ್ನು "ಶ್ರೀ ವಿಜಯಪುರಂ" ಎಂದು ಮರುನಾಮಕರಣ ಮಾಡಿದ ಕೇಂದ್ರ ಸರ್ಕಾರ

ಕೇಂದ್ರ ಸರ್ಕಾರವು ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ರಾಜಧಾನಿ ಪೋರ್ಟ್ ಬ್ಲೇರ್ ಅನ್ನು "ಶ್ರೀ ವಿಜಯ ಪುರಂ" ಎಂದು ಮರುನಾಮಕರಣ ಮಾಡಲು ನಿರ್ಧರಿಸಿದೆ. ಈ ನಿರ್ಧಾರವು ಪ್ರಾಚೀನ ಶ್ರೀ ವಿಜಯ ಸಾಮ್ರಾಜ್ಯದಿಂದ ಸ್ಫೂರ್ತಿ ಪಡೆದು ಪ್ರದೇಶದ ಐತಿಹಾಸಿಕ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ಗೌರವಿಸುವ ಸರ್ಕಾರದ ಉದ್ದೇಶವನ್ನು ಪ್ರತಿಬಿಂಬಿಸುತ್ತದೆ. ದೇಶವನ್ನು ವಸಾಹತುಶಾಹಿ ಮುದ್ರೆಗಳಿಂದ ಮುಕ್ತಗೊಳಿಸಲು ಈ ಮರುನಾಮಕರಣ ಮಾಡಲಾಗಿದೆ. ಶ್ರೀ ವಿಜಯ ಪುರಂ ನಮ್ಮ ಸ್ವಾತಂತ್ರ್ಯ ಹೋರಾಟದಲ್ಲಿ ಸಾಧಿಸಿದ ವಿಜಯವನ್ನು ಮತ್ತು ಅಂಡಮಾನ್ ಮತ್ತು ನಿಕೋಬರ್ ದ್ವೀಪಗಳ ವಿಶಿಷ್ಟ ಪಾತ್ರವನ್ನು ಸಂಕೇತಿಸುತ್ತದೆ ಎಂದು ಕೇಂದ್ರ ಗೃಹಸಚಿವ ಅಮಿತ್ ಶಾ ತಿಳಿಸಿದ್ದಾರೆ.



## ದೇಶದಲ್ಲಿ ಏಕ ಚುನಾವಣೆ ಶಿಫಾರಸಿಗೆ ಕೇಂದ್ರ ಸಂಪುಟ ಅನುಮೋದನೆ

ಪ್ರಧಾನಿ ನರೇಂದ್ರ ಮೋದಿ ಸರ್ಕಾರ ಮಹತ್ವಾಕಾಂಕ್ಷೆಯ ಒಂದು ದೇಶ, ಒಂದು ಚುನಾವಣೆ ಭರವಸೆ ಸಾಕಾರದ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ ಮುಂದಿಟ್ಟಿದೆ. ಬಹುದಿನಗಳಿಂದ ಚರ್ಚೆಯಲ್ಲಿರುವ ಏಕಕಾಲದಲ್ಲಿ ಚುನಾವಣೆ ಸಂಬಂಧ ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ



ಸಮಿತಿ ಮಾಡಿದ್ದ ಶಿಫಾರಸುಗಳಿಗೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ನಿರೀಕ್ಷೆಯಂತೆ ಈ ನಿರ್ಧಾರಕ್ಕೆ ಬಿಜೆಪಿ ಮಿತ್ರರೂ ಸೇರಿದಂತೆ 32 ಪಕ್ಷಗಳು ಬೆಂಬಲ ಸೂಚಿಸಿದರೆ, ಕಾಂಗ್ರೆಸ್ ಒಳಗೊಂಡ 15 ಪಕ್ಷಗಳು ವಿರೋಧಿಸಿವೆ.

'ಏಕಕಾಲದಲ್ಲಿ ಚುನಾವಣೆ ನಡೆಸಲು ಸರ್ವಾನುಮತದ ಅಭಿಪ್ರಾಯವಿದೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಷಾ, ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಒಳಗೊಂಡಿರುವ ಈ ಸಮಿತಿ, ಕೆಲವು ವೋಟಿಂಗ್‌ಗಳನ್ನು ಉಲ್ಲೇಖಿಸಿದೆ. ಏಕಕಾಲದಲ್ಲಿ ಚುನಾವಣೆ ನಡೆಸುವುದರಿಂದ ಚುನಾವಣಾ ವ್ಯವಸ್ಥೆ, ಆಡಳಿತದಲ್ಲಿ ಪರಿವರ್ತನೆ ಆಗಲಿದೆ. ಸಂಪನ್ಮೂಲದ ಕೊರತೆ ಕೂಡ ತಗ್ಗಲಿದೆ ಎಂದಿರುವ ಸಮಿತಿ, 32 ಪಕ್ಷಗಳು, ಸುಪ್ರೀಂಕೋರ್ಟ್ ಮಾಜಿ ಮುಖ್ಯ ನ್ಯಾಯಮೂರ್ತಿಗಳು, ಹೈಕೋರ್ಟ್ ಮಾಜಿ ನ್ಯಾಯಾಧೀಶರು ಸೇರಿದಂತೆ ನ್ಯಾಯಾಂಗದ ಹಲವು ಪ್ರಮುಖರು ಇದಕ್ಕೆ ಸಹಮತ ಸೂಚಿಸಿದ್ದಾರೆ ಎಂದಿದೆ. ಒಂದು ದೇಶ ಒಂದು ಚುನಾವಣೆಯಿಂದ ಮತದಾರರಿಗೂ ಚುನಾವಣಾ ಪ್ರಕ್ರಿಯೆ ಸರಳವಾಗಲಿದೆ.

## ಇಸ್ರೋ ಕನಸಿಗೆ ಕೇಂದ್ರ ಸರ್ಕಾರದಿಂದ ಅನುಮೋದನೆ

ಜಗತ್ತಿನ ಮೆಚ್ಚುಗೆಗೆ ಪಾತ್ರವಾಗಿದ್ದ ಚಂದ್ರಯಾನ-3ರ ಲ್ಯಾಂಡರ್ ಮತ್ತು ರೋವರ್ ಚಂದ್ರನ ಮೇಲೆ ಯಶಸ್ವಿಯಾಗಿ ಲ್ಯಾಂಡಿಂಗ್ ಮಾಡಿದ ನಂತರ ಇದೀಗ ಮುಂದಿನ ಹಂತವಾದ ಚಂದ್ರಯಾನ-4, ಮಿಷನ್ ಶುಕ್ರ, ಸ್ವಂತ ಬಾಹ್ಯಾಕಾಶ ನಿಲ್ದಾಣಕ್ಕೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಕೇಂದ್ರ ಸಚಿವ ಸಂಪುಟ ನಡೆದ ಬಳಿಕ ಸುದ್ದಿಗೋಷ್ಠಿ ನಡೆಸಿದ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್, ಚಂದ್ರಯಾನ-4 ಯೋಜನೆಗೆ ಸಂಬಂಧಿಸಿದಂತೆ ಮಾತನಾಡಿ, ವೀನಸ್ ಆರ್ಬಿಟರ್ ಮಿಷನ್, ಭಾರತೀಯ ಬಾಹ್ಯಾಕಾಶ ನಿಲ್ದಾಣದ ಅಭಿವೃದ್ಧಿ ಮತ್ತು ಮುಂದಿನ ಪೀಳಿಗೆಯ ಉಡಾವಣಾ ವಾಹನ ಅಭಿವೃದ್ಧಿಯ ಯೋಜನೆಗೆ ಕ್ಯಾಬಿನೆಟ್ ಅನುಮೋದನೆ ನೀಡಿದೆ ಎಂದು ತಿಳಿಸಿದರು.

ಶುಕ್ರ ಗ್ರಹವನ್ನು ಅನ್ವೇಷಿಸಲು ಮತ್ತು ಅಧ್ಯಯನ ಮಾಡಲು ಯೋಜಿಸಲಾಗಿರುವ ವೀನಸ್ ಆರ್ಬಿಟರ್ ಮಿಷನ್ ಗೂ ಕೇಂದ್ರ ಅನುಮೋದನೆ ನೀಡಿದೆ. ಅಷ್ಟೇ ಅಲ್ಲದೇ ಅಗತ್ಯ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವ ಮೂಲಕ 2040ರ ವೇಳೆಗೆ ಭಾರತೀಯ ಗಗನಯಾತ್ರಿಗಳನ್ನು ಚಂದ್ರನ ಮೇಲೆ ಇಳಿಸುವ ಮತ್ತು ಅವರನ್ನು ಸುರಕ್ಷಿತವಾಗಿ ಭೂಮಿಗೆ ಮರಳಿ ತರುವ ಚಂದ್ರಯಾನ-4 ಎಂಬ ಮಹತ್ವಾಕಾಂಕ್ಷೆಯ ಯೋಜನೆಗೆ ಒಪ್ಪಿಗೆ ನೀಡಿದೆ. ಡಾಕಿಂಗ್/ಅನ್ ಡಾಕಿಂಗ್, ಲ್ಯಾಂಡಿಂಗ್, ಚಂದ್ರನ ಮಾದರಿ ಸಂಗ್ರಹಣೆ ಮತ್ತು ವಿಶ್ಲೇಷಣೆ, ಜತೆಗೆ ಭೂಮಿಗೆ ಸುರಕ್ಷಿತವಾಗಿ ಮರಳಲು ಅಗತ್ಯ ತಂತ್ರಜ್ಞಾನಗಳ ಅಗತ್ಯವಿದೆ. ಮಿಷನ್ ಚಂದ್ರಯಾನ-4 ಯೋಜನೆಗೆ ಸುಮಾರು 2,104.06 ಕೋಟಿ ರೂ. ಅಗತ್ಯವಿದೆ ಎಂದು ಅಂದಾಜಿಸಲಾಗಿದೆ.

## 2026ರ ಮೊದಲು ದೇಶದಲ್ಲಿ ನಕ್ಸಲಿಸಂ ಅಂತ್ಯವಾಗುತ್ತದೆ: ಅಮಿತ್ ಶಾ

ಮಾರ್ಚ್ 2026 ರ ಮೊದಲು ಮಾವೋವಾದ ಮತ್ತು ನಕ್ಸಲಿಸಂನ ಕಲ್ಪನೆಯನ್ನು ದೇಶದಿಂದ ಕಿತ್ತೊಗೆಯಲು ಸರ್ಕಾರ ನಿರ್ಧರಿಸಿದೆ. ಛತ್ತೀಸ್‌ಗಢದ ಸುಮಾರು 55 ನಕ್ಸಲ್ ಹಿಂಸಾಚಾರದಿಂದ ಸಂತ್ರಸ್ತರಾದ ನವದೆಹಲಿಯ ತಮ್ಮ ನಿವಾಸದಲ್ಲಿ ಸಂವಾದ ನಡೆಸಿದ ಶಾ, ಬಸ್ತಾರ್‌ನ 4 ಜಿಲ್ಲೆಗಳನ್ನು ಹೊರತುಪಡಿಸಿ ಇಡೀ ದೇಶದಲ್ಲಿ ನಕ್ಸಲಿಸಂ ಅನ್ನು ಕೊನೆಗೊಳಿಸುವಲ್ಲಿ ಕೇಂದ್ರ ಯಶಸ್ವಿಯಾಗಿದೆ.

ಹಿಂಸಾಚಾರವನ್ನು ತ್ಯಜಿಸಿ, ಶಸ್ತ್ರಾಸ್ತ್ರಗಳನ್ನು ತ್ಯಜಿಸಿ ಮತ್ತು ಶರಣಾಗುವಂತೆ ಶಾ ನಕ್ಸಲರಿಗೆ ಈ ವೇಳೆ ಮನವಿ ಮಾಡಿದ್ದಾರೆ. ಹಿಂಸಾಚಾರವನ್ನು ಕೈಬಿಡುವಂತೆ ನಕ್ಸಲರು ತಮ್ಮ ಮನವಿಗೆ ಕಿವಿಗೊಡದಿದ್ದರೆ ಅವರ ವಿರುದ್ಧ ಸರ್ಕಾರ ಶೀಘ್ರವೇ ಸಂಪೂರ್ಣ ಕಾರ್ಯಾಚರಣೆ ನಡೆಸಲಿದೆ.

ಮಾವೋವಾದಿಗಳ ವಿರುದ್ಧದ ಕಾರ್ಯಾಚರಣೆಯಲ್ಲಿ ಭದ್ರತಾ ಪಡೆಗಳು ಗಮನಾರ್ಹ ಯಶಸ್ಸನ್ನು ಸಾಧಿಸಿವೆ.ರ ಸಮಸ್ಯೆಯು ಈಗ ಛತ್ತೀಸ್‌ಗಢದ ಕೇವಲ ನಾಲ್ಕು ಜಿಲ್ಲೆಗಳಿಗೆ ಸೀಮಿತವಾಗಿದೆ. ಮಾವೋವಾದಿಗಳು ಒಮ್ಮೆ ಪಶುಪತಿನಾಥದಿಂದ (ನೇಪಾಳ) ತಿರುಪತಿಗೆ (ಆಂಧ್ರಪ್ರದೇಶ) ಕಾರಿಡಾರ್ ಸ್ಥಾಪಿಸಲು ಯೋಜಿಸಿದ್ದರು ಆದರೆ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಅದನ್ನು ನಾಶಪಡಿಸಿತು ಎಂದು ಕೇಂದ್ರ ಗೃಹಮಂತ್ರಿ ಅಮಿತ್ ಶಾ ತಿಳಿಸಿದರು.

ನಮ್ಮ ಭದ್ರತಾ ಸೇನೆಗಳು ನಕ್ಸಲಿಸಂ ಅನ್ನು ಬುಡಸಮೇತ ನಾಶ ಪಡಿಸಲು ಎಲ್ಲಾ ರೀತಿಯ ಪ್ರಯತ್ನಗಳನ್ನೂ ಮಾಡಿದೆ. ಅವರ ಪ್ರಯತ್ನದ ಜೊತೆಗೆ ಕೇಂದ್ರ ಗೃಹ ಸಚಿವಾಲಯವು ಛತ್ತೀಸ್‌ಗಢದ ನಕ್ಸಲ್ ಹಿಂಸಾಚಾರ ಪೀಡಿತ ಜನರಿಗೆ ರಾಜ್ಯ ಸರ್ಕಾರದೊಂದಿಗೆ ನಿಕಟ ಸಮನ್ವಯದೊಂದಿಗೆ ಕಲ್ಯಾಣ ಯೋಜನೆಯನ್ನು ಶೀಘ್ರದಲ್ಲೇ ರೂಪಿಸಲಿದೆ ಎಂದೂ ತಿಳಿಸಿದರು.

## ಅನುಮತಿಯಿಲ್ಲದೆ ಹೈಕೋರ್ಟ್ ಕಲಾಪ ವಿಡಿಯೋ ರೆಕಾರ್ಡ್, ಹಂಚಿಕೆಗೆ ನಿರ್ಬಂಧ

ನ್ಯಾಯಾಲಯದ ಕಲಾಪದ ವಿಡಿಯೋಗಳು ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ಹೈಕೋರ್ಟ್, ಪೂರ್ವಾನುಮತಿ ಪಡೆಯದೆ ಕಲಾಪದ ವಿಡಿಯೋಗಳನ್ನು ರೆಕಾರ್ಡ್ ಹಾಗೂ ಹಂಚಿಕೆ ಮಾಡುವುದಕ್ಕೆ ಹೈಕೋರ್ಟ್ ನಿರ್ಬಂಧ ಹೇರಿದೆ. ಇತ್ತೀಚೆಗೆ ಅನೇಕ ನ್ಯಾಯಮೂರ್ತಿಗಳು ಮಾತನಾಡಿರುವ ಹೈಕೋರ್ಟ್ ದೃಶ್ಯಗಳು ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿ ರಾಷ್ಟ್ರಾದ್ಯಂತ ಚರ್ಚೆಯಾದ ಬೆನ್ನಲ್ಲೇ ಹೈಕೋರ್ಟ್ ಈ ನಿರ್ಬಂಧ ಹೇರಿದೆ. ಅನುಮತಿ ಪಡೆದಿರುವ ವ್ಯಕ್ತಿ, ಸಂಸ್ಥೆ ಹೊರತುಪಡಿಸಿ ಯಾವುದೇ ವ್ಯಕ್ತಿ, ಸಂಸ್ಥೆ (ಮುದ್ರಣ, ವಿದ್ಯುನ್ಮಾನ ಮತ್ತು ಸಾಮಾಜಿಕ ಜಾಲತಾಣಗಳು)ಕೋರ್ಟ್ ಕಲಾಪದ ಲೈವ್ ಸ್ಟ್ರೀಮಿಂಗ್, ಹೈಕೋರ್ಟ್ ಯೂಟ್ಯೂಬ್ ಚಾನಲ್‌ನಲ್ಲಿನ ವಿಡಿಯೋಗಳನ್ನು ರೆಕಾರ್ಡ್, ಹಂಚಿಕೆ ಮಾಡುವಂತಿಲ್ಲ ಎಂದಿದೆ. ಲೈವ್ ಸ್ಟ್ರೀಮಿಂಗ್‌ಗೂ ಮುನ್ನ ಸಂದೇಶ ನೋಟಿಸನ್ನು ಎಲ್ಲಾ ಕೋರ್ಟ್ ಹಾಲ್‌ಗಳ ವಿಡಿಯೋ ಕಾನ್ಫರೆನ್ಸ್ ಪರದೆಯ ಮೇಲೆ ಕಲಾಪ ಆರಂಭಕ್ಕೂ ಮುನ್ನ ಮತ್ತು ಮಧ್ಯಾಹ್ನ ಭೋಜನದ ವೇಳೆ ಪ್ರಸಾರ ಮಾಡಲಾಗಿದೆ.




ಕೋರ್ಟ್ ಕಲಾಪದ ರೆಕಾರ್ಡಿಂಗ್ ಮತ್ತು ಆರ್ಕೈವ್ ದತ್ತಾಂಶದ ಮೇಲೆ ನ್ಯಾಯಾಲಯಕ್ಕೆ ವಿಶೇಷ ಹಕ್ಕುಸ್ವಾಮ್ಯವಿದೆ. ನಿಯಮ ಉಲ್ಲಂಘಿಸಿದ ವ್ಯಕ್ತಿ ಅಥವಾ ಸಂಸ್ಥೆಯ ವಿರುದ್ಧ ಕ್ರಮಕೈಗೊಳ್ಳಲಾಗುತ್ತದೆ. ಈ ನಿರ್ಬಂಧ ಎಲ್ಲಾ ಅಪ್ಲಿಕೇಶನ್‌ಗಳಿಗೂ (ವಾಟ್ಸ್ ಆ್ಯಪ್, ಮೆಸೆಂಜರ್) ಅನ್ವಯಿಸಲಿದೆ ಎಂದು ನೋಟಿಸ್‌ನಲ್ಲಿ ಹೇಳಲಾಗಿದೆ. ಕರ್ನಾಟಕ ಹೈಕೋರ್ಟ್ 2022ರ ಜ.1ರಂದು 'ಕರ್ನಾಟಕ ನ್ಯಾಯಾಲಯ ಕಲಾಪಗಳ ನೇರಪ್ರಸಾರ (ಲೈವ್‌ಸ್ಟ್ರೀಮ್) ಮತ್ತು ರೆಕಾರ್ಡಿಂಗ್ ನಿಯಮಗಳು 2021 'ಗಳನ್ನು ಜಾರಿಗೊಳಿಸಿದೆ. ಇದರಲ್ಲಿ ಲೈವ್ ಸ್ಟ್ರೀಮಿಂಗ್ ರೆಕಾರ್ಡಿಂಗ್ ನಿಯಮಗಳನ್ನು ಅಡಕಗೊಳಿಸಲಾಗಿದೆ.

## ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ 35 ಲಕ್ಷ ಪ್ರಕರಣಗಳು ಇತ್ಯರ್ಥ



ರಾಜ್ಯಾದ್ಯಂತ ಇತ್ತೀಚೆಗೆ ನಡೆದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ರಾಜಿ ಸಂಧಾನದ ಮೂಲಕ 35 ಲಕ್ಷ ಕ್ಕೂ ಹೆಚ್ಚು ಪ್ರಕರಣಗಳ ಇತ್ಯರ್ಥಪಡಿಸಿ, ಒಟ್ಟು 2,402 ಕೋಟಿ ರು. ಪರಿಹಾರ ಕೊಡಿಸಲಾಗಿದೆ ಎಂದು ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷ, ಹೈಕೋರ್ಟ್ ನ್ಯಾಯಮೂರ್ತಿ ವಿ.ಕಾಮೇಶ್ವರ ರಾವ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ. ಸೆ.14ರಂದು ಬೆಂಗಳೂರು, ಧಾರವಾಡ ಮತ್ತು ಕಲಬುರಗಿಯ ಹೈಕೋರ್ಟ್‌ನ ಮೂರು ಪೀಠಗಳು ಸೇರಿದಂತೆ ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ಒಟ್ಟು 1008 ಪೀಠಗಳು ಲೋಕ ಅದಾಲತ್ ನಡೆಸಿವೆ. ನ್ಯಾಯಾಲಯದಲ್ಲಿ ಬಾಕಿಯಿದ್ದ 2,00,083 ಮತ್ತು ವ್ಯಾಜ್ಯಪೂರ್ವ 33,84,347 ಪ್ರಕರಣ ಸೇರಿದಂತೆ ಒಟ್ಟು 35,84,430 ಪ್ರಕರಣಗಳು ಇತ್ಯರ್ಥಪಡಿಸಲಾಗಿದೆ.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-560 004. ಮೊಬೈಲ್: 97391 83021

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-18.